# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Good Opportunity for Branding
1,20,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 227 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.03.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 227 • PRGI No:KARKAN/2023/88055 • VIJAYANAGARA • 14.03.2025 • Friday • Page:04 • Rs:2


## ಪಾಲಕರೇ ಮತ್ತು ಶಿಕ್ಷಕರೇ ನೀವು ಭಯಪಡಬೇಡಿ!

ನಾವು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು, ಪರೀಕ್ಷೆಯ ದಿನ ಸಮೀಪಿಸುತ್ತಿದ್ದರೂ ನಾವು ಆತ್ಮವಿಶ್ವಾಸದಿಂದ ಪೂರ್ಣ ಸಿದ್ಧರಾಗಿದ್ದೇವೆ. ನಮ್ಮ ಅಧ್ಯಯನ, ಮಾರ್ಗದರ್ಶನ ಮತ್ತು ಪರಿಶ್ರಮ ನಮ್ಮ ಶಕ್ತಿಯ ಮೂಲವಾಗಿದೆ. ಪ್ರಶ್ನೆಪತ್ರಿಕೆ ನಮ್ಮ ಎದುರು ಬಂದಾಗ, ತಲೆತಗ್ಗಿಸದೆ ಧೈರ್ಯದಿಂದ ಉತ್ತರಿಸುತ್ತೇವೆ.

ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ. ನಾವು ಎಚ್ಚರಿಕೆಯಿಂದ, ಮನೋಸ್ಥೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಉತ್ತರಿಸುತ್ತೇವೆ. ವೈಫಲ್ಯ ಎಂಬುದು ನಮ್ಮ ಮನಸ್ಸಿಗೆ ಪ್ರವೇಶವಿಲ್ಲ. ಜಯ ನಮ್ಮ ಗುರಿ

ನಂಬಿಕೆ, ಪರಿಶ್ರಮ ಮತ್ತು ಧೈರ್ಯ ಈ ಮೂರನ್ನು ನಮ್ಮ ಹತ್ತಿರ ಇಟ್ಟುಕೊಂಡಿದ್ದೇವೆ. ಆದ್ದರಿಂದ, ಪಾಲಕರೇ ಮತ್ತು ಶಿಕ್ಷಕರೇ, ನೀವು ನಮ್ಮ ಮೇಲೆ ನಂಬಿಕೆ ಇಡಿ. ನಾವು ಸಂಪೂರ್ಣ ಸಿದ್ಧರಾಗಿದ್ದೇವೆ.

ವಿಜಯ ನಮ್ಮದೇ! – ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು

### ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

### ಆನಂದ ಬಾಣ




### ಮೈಕ್ರೋ ನ್ಯೂಸ್

## ಮಾರ್ಚ್ 15 ರಂದು ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪ ವಿಭಾಗದ ಕಚೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಮಾರ್ಚ್ 15 ರಂದು ಮದ್ಯಾಹ್ನ 3 ಗಂಟೆಗೆ ಏರ್ಪಡಿಸಲಾಗಿದ್ದು. ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ಅಹವಾಲುಗಳು ಸಲ್ಲಿಸಿ ಪರಿಹರಿಸಕೊಳ್ಳಬಹುದು ಎಂದು ಕಾರ್ಯ ಮತ್ತು ಪಾಲನೆ ಗ್ರಾಮಿಣ ಉಪ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದಯಾನಂದರವರು ತಿಳಿಸಿದ್ದಾರೆ.

## ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ (ವೃತ್ತಿಪರ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಸ್ನಾತಕೋತ್ತರ ಪದವಿ ಮತ್ತು ನರ್ಸಿಂಗ್ ಕೋರ್ಸ್) ಅಧ್ಯ ಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ 'ಶುಲ್ಕ ಮರುಪಾವತಿ' ಕಾರ್ಯ ಕ್ರಮದಡಿ ಈಗಾಗಲೇ ಅರ್ಜಿ ಆಹ್ವಾನಿ ಸಲಾಗಿದ್ದು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ವಿದ್ಯಾಸಂಸ್ಥೆಗಳ ಮನವಿ ಮೇರೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾ.31ರ ವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಭಾನುಮತಿ ತಿಳಿಸಿದ್ದಾರೆ.


Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಸ್ವಾಗತ/ಶುಭಾಶಯ ಕೋರಲು ಬಯಸುವವರು
ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


ಉಪಲೋಕಾಯುಕ್ತ ಬಿ.ವೀರಪ್ಪ ಹೇಳಿಕೆ | ಭ್ರಷ್ಟಾಚಾರ ಮನೆಯಿಂದಲೇ ತೊಲಗಿಸಿ | ಸುಳ್ಳು ದೂರು ನೀಡಿದ್ರೆ 3 ವರ್ಷ ಜೈಲು

# ಭ್ರಷ್ಟಾಚಾರ ಹಣದಿಂದ ಗೌರವ ಸಿಗದು

ಆಕ್ಟೋಪಾಸ್‌ನಂತೆ ಸರ್ವವ್ಯಾಪಿಯಾಗಿದೆ ಭ್ರಷ್ಟಾಚಾರ | ಜನರು ದಂಗೆ ಏಳುವ ಮುನ್ನ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು

ಮತ ಮಾರಿಕೊಂಡರೆ ಭ್ರಷ್ಟಾಚಾರಕ್ಕೆ ಹೆಬ್ಬಾಗಿಲು ತೆರೆದಂತೆ | ಅವಧಿ ಮುಗಿದ ಆಹಾರ ಮಾರಾಟ, ಅಧಿಕಾರಿಗಳ ವಿರುದ್ಧ ಗರಂ

ತಂದೆ, ತಾಯಿಗಳು ತಮ್ಮ ಮಕ್ಕಳು ಚಿಕ್ಕಂದಿನಿಂದಿರುವಾಗಲೇ ಸತ್ಪ್ರಜೆ, ಪ್ರಾಮಾಣಿಕತೆ ಬಗ್ಗೆ ತಿಳುವಳಿಕೆ ಮೂಡಿಸಬೇಕು







**ಹಂಪಿ ಟೈಮ್ಸ್ ಹೊಸಪೇಟೆ**

ಆಡಳಿತದಲ್ಲಿನ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ ಲೋಕಪಾಲ್ ಮಸೂದೆ ಸೇರಿದಂತೆ ಲೋಕಾಯುಕ್ತ ಸಂಸ್ಥೆಯನ್ನು ಜಾರಿಗೆ ತಂದಿದ್ದರೂ ಭ್ರಷ್ಟಾಚಾರ ಅಕ್ಟೋಪಾಸ್‌ನಂತೆ ಸರ್ವವ್ಯಾಪಿಯಾಗಿದ್ದು ಸರಿಪಡಿಸಿ ಕೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ಜನ ಧಂಗೆ ಏಳಬಹುದು ಎಂದು ಉಪ ಲೋಕಾಯುಕ್ತರಾದ ಬಿ.ವೀರಪ್ಪನವರು ತಿಳಿಸಿದರು.

ಅವರು ಗುರುವಾರ ದಿಂದ ಶನಿವಾರದ ವರೆಗೆ ಮೂರು ದಿನಗಳ ಕಾಲ ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು ಮಾ.13 ರಂದು ಹೊಸಪೇಟೆ ನಗರದ ಸಹಕಾರಿ ಕಲ್ಯಾಣ ಮಂಟಪದಲ್ಲಿ ವಿವಿಧ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲು, ಕುಂದುಕೊರತೆಗಳ ದೂರು ವಿಚಾರಣೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಶೇ 95 ರಷ್ಟು ಜನರು ದೇಶಭಕ್ತರಾಗಿದ್ದರು, ಶೇ 5 ರಷ್ಟು ಮಾತ್ರ ಮೀರ್ ಸಾಧಿಕ್ ಜನರಿದ್ದರು. ಆದರೆ ಸ್ವಾತಂತ್ರ್ಯ ನಂತರ ಮೀರ್ ಸಾಧಿಕ್ ಜನರ ಸಂಖ್ಯೆ ಹೆಚ್ಚಿದ್ದು ಭ್ರಷ್ಟಾಚಾರ ಹೆಚ್ಚಿದೆ. ಆಸ್ಪತ್ರೆ, ಹಾಸ್ಟೆಲ್, ಖಾತೆ ಮಾಡಲು ವಿಳಂಬ, ಜನನ ಮತ್ತು ಮರಣ ಪ್ರಮಾಣ ಪತ್ರ ಪಡೆಯಲು ಅಲೆದಾಟ ಸೇರಿದಂತೆ ಜನರನ್ನು ಅಲೆದಾಡಿಸುವ ಕೆಲಸ ಜಾಸ್ತಿಯಾಗುತ್ತಿದೆ. ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಯವರು ಜನರ ತೆರಿಗೆ ಹಣದಿಂದ ಸಂಬಳ ಪಡೆದು ಕೆಲಸ ಮಾಡುತ್ತಿಲ್ಲ, ಎಲ್ಲಾ ಅಂಗಗಳಿದ್ದರೂ ತಮ್ಮ ಕರ್ತವ್ಯ ಶ್ರದ್ದೆ ಇಲ್ಲದಂತಾಗಿದ್ದು ಬಡಿದೆಬ್ಬಿಸಬೇಕಾಗಿದೆ. ಜನರ ಹಕ್ಕುಗಳನ್ನು ಮೊಟಕುಗೊಳಿಸಲು ನಾವ್ಯಾರು, ಅಧಿಕಾರಿಗಳು ಇನ್ನು ಮುಂದಾದರೂ ಎಚ್ಚೆತ್ತುಕೊಳ್ಳಬೇಕಿದೆ.

### ಭ್ರಷ್ಟಾಚಾರದ ಹಣ ಮೈಲಿಗೆ ಇದ್ದಂತೆ, ಮನೆಗೆ ತರಬೇಡಿ ಎಂಬ ಧೋರಣೆ ಬರಲಿ

ಭ್ರಷ್ಟಾಚಾರದ ಹಣದಿಂದ ಬಟ್ಟೆಯನ್ನು ಕೊಳ್ಳುವುದಿಲ್ಲ, ಒಡವೆ ಖರೀದಿ ಮಾಡುವುದಿಲ್ಲ ಎಂಬ ಧೋರಣೆ ಮನೆಯಿಂದ ಆರಂಭವಾಗಬೇಕು. ಆದರೆ ಸಮಾಜದಲ್ಲಿ ಭ್ರಷ್ಟತೆಯಿಂದ ಹಣ ಸಂಪಾದಿಸಿದವರ ಹಿಂದೆ ನೊಣಗಳಂತೆ ಮುತ್ತಿಕೊಳ್ಳುತ್ತಾರೆ. ಸಮಾಜ ನೋಡುವ ದೃಷ್ಟಿಯು ಸಹ ಬದಲಾಗಬೇಕಿದ್ದು ಕುರ್ಚಿ ಮತ್ತು ಸಂಪತ್ತು ಎಂದಿಗೂ ಶಾಶ್ವತವಲ್ಲ, ನಾವು ಮಾಡಿದ ಕೆಲಸ ಮಾತ್ರ ಗೌರವ ತಂದುಕೊಡುವುದರಿಂದ ಸೇವೆ ಮಾಡಲು ಸಿಕ್ಕಿರುವ ಅವಕಾಶವನ್ನು ಸಾರ್ವಜನಿಕರ ಕಣ್ಣೀರು ಒರೆಸುವ ಕೆಲಸ ಮಾಡಬೇಕೆಂದು ಸರ್ಕಾರಿ ಅಧಿಕಾರಿಗಳಿಗೆ ತಿಳಿಸಿದರು.

**ಬಸ್ ನಿಲ್ದಾಣಕ್ಕೆ ಭೇಟಿ:** ಬೆಳ್ಳಂಬೆಳಗ್ಗೆ ಹೊಸಪೇಟೆ ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದಾಗ ಇಲ್ಲಿ ರಸ್ತೆಯೇ ಬಯಲು ಶೌಚಾಲಯವಾಗಿದೆ. ಮತ್ತು ಇಲ್ಲಿನ ಸ್ಟಾಲ್‌ಗಳಲ್ಲಿ ಅವಧಿ ಮೀರಿದ ತಂಪು ಪಾನೀಯಗಳು ಕಂಡು ಬಂದಿದ್ದು ಇಲ್ಲಿನ ಲೋಪದೋಷಗಳ ವಿರುದ್ದವಾಗಿ ಪ್ರಕರಣ ದಾಖಲಿಸಲು ಸೂಚನೆ ನೀಡಲಾಗಿದೆ ಎಂದರು.

ಜನರು ಸಹ ಪರಿಸರವನ್ನು ಸ್ವಚ್ಚವಾಗಿಟ್ಟುಕೊಳ್ಳಲು ತಮ್ಮ ಕರ್ತವ್ಯ ನಿರ್ವಹಿಸಬೇಕಾಗಿದೆ. ಇಲ್ಲಿನ ಬಸವ ಹಾಗೂ ರಾಯ ಕಾಲುವೆಗೆ ಮನೆ ಶೌಚದ ನೀರು, ಅನೈರ್ಮಲ್ಯದ ನೀರನ್ನು ಬಿಡುತ್ತಿದ್ದು ಇದೇ ನೀರು ಕೃಷಿಗೆ ಬಳಕೆಯಾಗಿ ವಿಷಪೂರಿತ ಆಹಾರ ತಿನ್ನುವಂತಾಗಿದೆ. ನಾಗರಿಕರಾದ ಎಲ್ಲರ ಕರ್ತವ್ಯಗಳು ಬಹಳ ಮುಖ್ಯವಾಗಿದ್ದು ವಿಜಯನಗರದ ಗತವೈಭವ ಮೆರೆಯಲು ಇಲ್ಲಿನ ಸ್ವಚ್ಚತೆ ಕಾಪಾಡಿಕೊಳ್ಳಬೇಕೆಂದರು.

**ಮತ ಮಾರಿಕೊಳ್ಳಬೇಡಿ:** ನಾಗರಿಕ ಸಮಾಜ ಬದಲಾಗುವ ಅವಶ್ಯಕತೆ ಇದ್ದು ಚುನಾವಣೆಯಲ್ಲಿ ನಾವು ಆಯ್ಕೆ ಮಾಡುವ ನಾಯಕನ ಆಯ್ಕೆ ದುಡ್ಡು ತಗೊಂಡು ಮತದಾನ ಮಾಡಬಾರದು. ಮತದಾರ ಪ್ರಭುಗಳಾಗಬೇಕು, ಮತ ಮಾರಿಕೊಂಡು ಜವಾನರಾಗ ಬಾರದು. ಯಾರು ಒಳ್ಳೆಯ ವ್ಯಕ್ತಿ ಎಂದು ಅರಿತು ಸಮಾಜ, ನಾಡು, ದೇಶಾಭಿವೃದ್ಧಿ ಕಾಳಜಿ ಇರುವ ವ್ಯಕ್ತಿಗೆ ದುಡ್ಡು ಇಲ್ಲದೆ ಗುರುತಿಸಿ ಮತದಾನ ಮಾಡಲು ತಿಳಿಸಿದರು.

**ಸರ್ವರಿಗೂ ಸಮಾನ ಅವಕಾಶ:** ಸಂವಿಧಾನದ ಅನುಚ್ಛೇಧ 14 ರನ್ವಯ ಸರ್ವರಿಗೂ ಸಮಪಾಲು, ಸಮಾನ ಅವಕಾಶ ಇದೆ. 21 ರ ವಿಧಿಯನ್ವಯ ಎಲ್ಲರೂ ಗೌರವದಿಂಧ ಬದುಕಬೇಕು. ಇದಕ್ಕಾಗಿ ಹಕ್ಕುಗಳನ್ನು ನೀಡಲಾಗಿದೆ. 51 ಎ ರನ್ವಯ ನಾಗರಿಕರ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದ್ದು ಇವುಗಳನ್ನು ನಾವೆಲ್ಲರೂ ಮರೆತು, ಪ್ರಶ್ನಿಸುವ ಮನೋಭಾವ ಇಲ್ಲದಿರುವುದರಿಂದ ಇಂತಹ ಭ್ರಷ್ಟಾಚಾರಗಳು ನಡೆಯಲು ಸಾಧ್ಯವಾಗಿದೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಶೇ 18 ರಷ್ಟಿದ್ದ ಸಾಕ್ಷರತಾ ಪ್ರಮಾಣ ಈಗ ಶೇ 80 ರಷ್ಟಿದ್ದರೂ ಭ್ರಷ್ಟಾಚಾರ ಹೆಚ್ಚಾಗಿದೆ. ಆದರೂ ಪ್ರಪಂಚದಲ್ಲಿ ಅಗ್ರಗಣ್ಯ ದೇಶಗಳಲ್ಲಿ 5 ನೇ ಸ್ಥಾನದಲ್ಲಿದ್ದು ಆಡಳಿತದಲ್ಲಿ ಸುಧಾರಣೆ ತರುವ ಮೂಲಕ ಎಲ್ಲರೂ ಸೇರಿ ಅಭಿವೃದ್ದಿಗೆ ಕೈಜೋಡಿಸಬೇಕಾಗಿದೆ ಎಂದರು.

**ಸುಳ್ಳು ದೂರು ನೀಡಿದಲ್ಲಿ ಕ್ರಮ:** ಲೋಕಾಯುಕ್ತದಲ್ಲಿ ದಾಖಲಾದ ದೂರುಗಳಲ್ಲಿ ಶೇ 30 ರಷ್ಟು ಸುಳ್ಳು ಕೇಸ್‌ಗಳನ್ನು ನೀಡಲಾಗಿದೆ. ಆದರೆ ಲೋಕಾಯುಕ್ತ ಸೆಕ್ಷನ್ 20 ರನ್ವಯ ಸುಳ್ಳು ದೂರು ನೀಡಿದಲ್ಲಿ 3 ವರ್ಷ ಜೈಲಿಗೆ ಕಳುಹಿಸಲಾಗುತ್ತದೆ. ಪ್ರಾಮಾಣಿಕ ಅಧಿಕಾರಿಗಳು ಇಂತಹ ದೂರುಗಳಿಂದ ಎದರುವ ಅವಶ್ಯಕತೆ ಇಲ್ಲ, ಭಯಪಡದೆ ಪ್ರಾಮಾಣಿಕವಾದ ಸೇವೆ ಮಾಡಿದವರಿಗೆ ಲೋಕಾಯುಕ್ತ ಎಂದಿಗೂ ರಕ್ಷಣೆ ನೀಡಲಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಜಿ.ಶಾಂತಾ ಮಾತನಾಡಿ, ಭ್ರಷ್ಟಾಚಾರ ಪ್ರಕರಣಗಳಲ್ಲಿ ಸರ್ಕಾರಿ ಅಧಿಕಾರಿ, ಸಿಬ್ಬಂದಿಯವರು ಸಾಕ್ಷಿ ನುಡಿಯುವಾಗ ವ್ಯತಿರಿಕ್ತ ಸಾಕ್ಷಿ ಹೇಳುವುದರಿಂದ ಅನೇಕ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗುತ್ತವೆ. ಹಳ್ಳಿಯಲ್ಲಿರುವ ಸಾಮಾನ್ಯ ವ್ಯಕ್ತಿ ಸರಿಯಾದ ಸಾಕ್ಷಿ ಹೇಳುತ್ತಾರೆ, ಸರ್ಕಾರಿ ಅಧಿಕಾರಿಗಳು ಸಾಕ್ಷಿಯ ವೇಳೆ ತಿರುಚುತ್ತಾರೆ, ಈ ಬಗ್ಗೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪರಿಶೀಲಿಸಬೇಕೆಂದರು.

ತಂದೆ, ತಾಯಿಗಳು ತಮ್ಮ ಮಕ್ಕಳನ್ನು ಚಿಕ್ಕಂದಿನಿಂದಲೇ ಸತ್ಪ್ರಜೆಯಾಗಿಸುವ ನಿಟ್ಟಿನಲ್ಲಿ ಪ್ರಾಮಾಣಿಕತೆ ಬಗ್ಗೆ ತಿಳುವಳಿಕೆ ಮೂಡಿಸಬೇಕು. ನಾವು ಪ್ರಾಮಾಣಿಕವಾಗಿ ದುಡಿಮೆ ಮಾಡಿ ಬದುಕಬೇಕು, ಆದರೆ ಬೇರೆಯವರು ಐದು ಹಂತಸ್ತಿನ ಮನೆ ಕಟ್ಟುತ್ತಾರೆ ಎಂದು ಕೈಲಾಗದನ್ನು ಮಾಡದೇ ಹಾಸಿಗೆ ಇದ್ದಷ್ಟು ಕಾಲುಚಾಚು ಎಂಬಂತೆ ಜೀವನ ನಡೆಸಿದಾಗ ಮಾತ್ರ ಭ್ರಷ್ಟರಾಗದೇ ಪ್ರಾಮಾಣಿಕರಾಗಲು ಸಾಧ್ಯ ಎಂದರು.

ಲೋಕಾಯುಕ್ತ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಉಪನಿಬಂಧಕರಾದ ಪೃಥ್ವಿ ವರ್ಣೀ ಕರ್, ಅರವಿಂದ ಎನ್.ವಿ, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಅಬ್ದುಲ್ ರೆಹಮಾನ್ ನಂದಗಡಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ ಎನ್.ಹೊಸಮನಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಪೊಲೀಸ್ ಅಧೀಕ್ಷಕರಾದ ಬಿ.ಎಲ್.ಶ್ರೀಹರಿಬಾಬು, ಲೋಕಾಯುಕ್ತ ಎಸ್.ಪಿ ಸಿದ್ದರಾಜ್ ನ್ಯಾಯಾಧೀಶರು, ಅಧಿಕಾರಿಗಳಿದ್ದರು.

## ಮಾ.27 ನಿಧಿ ಆಪ್ಕೆ ನಿಕಟ್


**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಮಾ.27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಂಡೂರು ತಾಲ್ಲೂಕಿನ ವಡ್ಡು ಗ್ರಾಮದ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ತಿಳಿಸಿದ್ದಾರೆ.

ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ. ಕಾರ್ಮಿಕರು, ಪಿಂಚಣಿ ದಾರರು, ಉದ್ಯೋಗದಾತರು ಕಾರ್ಯ ಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ಮಾ.15ರಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**



ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ವಿದ್ಯುತ್ ಮಾರ್ಗಗಳ ನಿರ್ವಹಣಾ ಕಾರ್ಯ ಕೈಗೊಳ್ಳುತ್ತಿರುವುದರಿಂದ ಮಾ.15 ರಂದು ಬೆಳಿಗ್ಗೆ 9 ಗಂಟೆಯಿಂದ ಮದ್ಯಾಹ್ನ 2 ಗಂಟೆಯವರೆಗೆ ಎಫ್–72 ರ ವ್ಯಾಪ್ತಿಯ ಕಂಟೋನ್‌ಮೆಂಟ್, ಸೂರ್ಯ ಕಾಲೋನಿ, ತಿಲಕ್ ನಗರ, ಸುಧಾ ಕ್ರಾಸ್, ನಂದಿ ಕಾಲೋನಿ, ಹೆಚ್‌ಆರ್‌ಜಿ ಕಾಲೋನಿ, ಜಯ ನಗರ, ರಹಿಮ್‌ಬಾದ್ ಕಾಲೋನಿ, ನಳಂದ ಕಾಲೇಜ್, ವಿಜಯನಗರ ಕಾಲೋನಿ, ಕೆಹೆಚ್‌ಬಿ ಕಾಲೋನಿ, ಜಗನ್ನಾಥ ಮಂದಿರ, ಭಾಸ್ಕರ ನಾಯ್ಡು, ಸೆಂಟ್ ಜೋಸೆಫ್ ಶಾಲೆ ಸೇರಿದಂತೆ ಇನ್ನೂ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

## ವಿದ್ಯಾರ್ಥಿಗಳಿಗೆ ಪ್ರವೇಶಾತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು, ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಮಕ್ಕಳು 2025–26ನೇ ಸಾಲಿಗೆ ಮಾನಸ ಗಂಗೋತ್ರಿ ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆ, ವಿಜಯಪುರ ಜಿಲ್ಲೆ ಮತ್ತು ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ ಮೈಸೂರು ಇಲ್ಲಿಗೆ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ವಿಜಯಪುರದ ಶಾಲೆಗೆ 5ನೇ ತರಗತಿ ಮತ್ತು ಪ್ರಥಮ ಪಿಯುಸಿ ಗೆ ಪ್ರವೇಶ ಪರೀಕ್ಷೆ ಮೇ 18 ರಿಂದ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01 ಗಂಟೆಗೆ,

ಯಾದವಗಿರಿ ಮೈಸೂರು ಇಲ್ಲಿಗೆ 8ನೇ ತರಗತಿಗೆ ಪ್ರವೇಶ ಪರೀಕ್ಷೆಯನ್ನು ಏ.12 ರಂದು ಬೆಳಿಗ್ಗೆ 10 ಗಂಟೆಗೆ ನಡೆಸಲಿದ್ದಾರೆ.

ಅರ್ಜಿ ಪಡೆದು ಭರ್ತಿ ಮಾಡಿ ಮಾ.26 ರೊಳಗೆ ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಬಳ್ಳಾರಿ, ಸಿರುಗುಪ್ಪ, ಸಂಡೂರು ಹಾಗೂ ಉಪನಿರ್ದೇಶಕರ ಕಛೇರಿ, ಕೋಟೆ, ಬಳ್ಳಾರಿ ಇಲ್ಲಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮೊ.9480843023 ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಸ್ಟುಡೆಂಟ್ ಕಾಲಂ

# ಆದದ್ದೆಲ್ಲ ಒಳ್ಳೇಯದಕ್ಕೆ



ಒಂದಾನೊಂದು ಊರಲ್ಲಿ ಒಬ್ಬ ರಾಜನಿದ್ದ. ಅವನ ಹತ್ತಿರ ಒಂದು ಮುದೆ ಒಂಟಿ ಇತ್ತು. ಒಂದು ದಿನ ಅದನ್ನು ಅರಮನೆಯಿಂದ ಹೊರಕ್ಕೆ ಬಿಟ್ಟಾಗ ತಪ್ಪಿಸಿಕೊಂಡು ಕಾಡಿಗೆ ಹೋಯಿತು. ರಾಜ ಮತ್ತು ಭಟ್ಟರು ಎಷ್ಟು ಹುಡುಕಿದರೂ ಒಂಟೆ ಸಿಗಲಿಲ್ಲ .ಆದರೆ ಭಟ್ಟರಿಗೆ ಮರದ ಕೆಳಗೆ ಮಲಗಿದ್ದ ಮುದುಕನೊಬ್ಬ ಕಂಡನು.

ನೀನು ರಾಜನ ಒಂಟೆಯನ್ನು ನೋಡಿದಿಯಾ ಎಂದು ಅವನನ್ನು ಕೇಳಿದರು. ಮುದುಕ ಸುತ್ತ ಮುತ್ತಲು ನೋಡಿ ಹೇಳಿದ ಇಲ್ಲ, ನಾನು ನೋಡಲಿಲ್ಲ ಆದರೆ ಅದರ ಒಂದು ಕಣ್ಣು ಕುರುಡಾಗಿತ್ತೆ ?, ಒಂದು ಕಾಲು ಕುಂಟಾಗಿತ್ತೆ ? ಅದರ ಬಾಯಲ್ಲಿನ ಹಲ್ಲುಗಳು ಬಿದ್ದು ಹೋಗಿದ್ದವೆ? ಎಂದು ಪ್ರಶ್ನಿಸಿದ, ಇದನ್ನು ಕೇಳಿ ರಾಜರಿಗೂ ಮತ್ತು ಭಟ್ಟರಿಗೆ ಆಚಾರ್ಯವಾಯಿತು! ರಾಜರು ಕೇಳಿದರು ನಮ್ಮ ಒಂಟೆಯನ್ನು ನೀನು ನೋಡಿಯೇ ಇಲ್ಲ ಆದರೆ ನೀನು ನೋಡಿದ ಹಾಗೆಯೇ, ಅದು ಇರುವ ಹಾಗೆಯೇ ವರ್ಣಿಸಿದಿಯಲ್ಲಾ, ಅದು ಹೇಗೆ ಮುದುಕ ? ಎಂದು ಪ್ರಶ್ನಿಸಿದರು. ಆಗ ಮುದುಕ ಅದೇನು ಕಷ್ಟವಲ್ಲ ಪ್ರಭು. ನೆಲದ ಮೇಲೆ ಕಾಲಿನ ಗುರುತು ನೋಡಿ ಅದು ಒಂಟೆ ಎಂದು ತಿಳಿದೆ, ಒಂದು ಹೆಜ್ಜೆಗಿಂತ ಇನ್ನೊಂದು ಹೆಜ್ಜೆ ಆಳವಾಗಿ ಊರದಿದ್ದ ಅದರ ಕಾಲು ಕುಂಟಿರಬಹುದೆಂದು ಊಹಿಸಿದೆ, ದಾರಿಯ ಬಲಬದಿಯ ಗಿಡಗಳನ್ನು ಮಾತ್ರ ತಿಂದು ಎಡಬದಿಯ ಗಿಡಗಳನ್ನು ಬಿಟ್ಟಿದ್ದರಿಂದ ಕುರುಡಿರಬಹುದು ಎಂದು ಊಹಿಸಿಕೊಂಡೆ, ನಂತರ ದಾರಿ ಉದ್ದಕ್ಕೂ ಹುಲ್ಲನ್ನು ಪೂರ್ತಿ ತಿನ್ನದೇ ತುಂಡು ತುಂಡಾಗಿ ಬಿದ್ದಿದ್ದರಿಂದ ಒಂಟೆಗೆ ಹಲ್ಲುಗಳಿಲ್ಲ ಎಂದು ಊಹಿಸಿದೆ ಎಂದನು.

ರಾಜ ಮುದುಕನ ಚಾಣಾಕ್ಷಣತನವನ್ನು ಮೆಚ್ಚಿ ಅವನನ್ನು ತನ್ನ ಮಂತ್ರಿಯಾಗಿ ಮಾಡಿಕೊಂಡನು. ನಂತರ ಮುದುಕ ಕಾಡಿಗೆ ಹೋಗಿ ಒಂಟೆಯನ್ನು ಹುಡುಕಿಕೊಡುವಲ್ಲಿ ಸಹಾಯ ಮಾಡಿದನು ಹೀಗೆ ಕಾಲಂತರ ದಲ್ಲಿ ಒಂದು ದಿನ ರಾಜ ತನ್ನ ಪರಿಹಾರದೊಂದಿಗೆ ಬೇಟೆಗೆ ಹೋಗಿದ್ದಾಗ ರಾಜನ ಒಂದು ಬೆರಳು ಕತ್ತರಿಸಿ ಹೋಯಿತು. ಮಂತ್ರಿ ಅದನ್ನು ನೋಡಿ ಹೋಗಲಿ ಬಿಡಿ ಮಹಾರಾಜರೇ ಆಗುವುದೆಲ್ಲ ಒಳ್ಳೆಯದಕ್ಕಂತೆ.

ಈ ಮಾತನ್ನು ಕೇಳಿ ರಾಜನು ಕೋಪಗೊಂಡು ಮಂತ್ರಿಯನ್ನು ಪಕ್ಕದಲ್ಲಿದ್ದ ಗುಂಡಿಗೆ ತಳ್ಳಿ ವೇಗವಾಗಿ ಹೊರಟೆ ಬಿಟ್ಟ. ಕಾಡಿನಲ್ಲಿ ಸ್ವಲ್ಪ ದೂರ ಹೋಗುವುದರಲ್ಲಿ ಕಾಡಿನ ಜನಗಳು ರಾಜನನ್ನು ಸುತ್ತ ಗಟ್ಟಿ ಸೆರೆಹಿಡಿದು ತಮ್ಮ ಕಾಡಿನ ದೇವತೆಗೆ ಬಲಿ ಕೊಡಲು ಎಳೆದುಕೊಂಡು ಹೋದರು. ಬಲಿ ಕೊಡುವವನು ರಾಜನ ಕತ್ತನ್ನು ಕತ್ತರಿಸಲು ಬಂದಾಗ ರಾಜನಿಗೆ ಒಂದು ಬೆರಳು ಇಲ್ಲದನ್ನು ನೋಡಿ ಮುಕ್ಕಾಗಿರುವ ಈ ವ್ಯಕ್ತಿಯನ್ನು ಬಲಿಕೊಡುವುದನ್ನು ನಮ್ಮ ದೇವತೆ ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಈತನನ್ನು ಬಲಿ ಕೊಡುವುದು ವ್ಯರ್ಥ ಎಂದು ಬಲಿ ಕೊಡುವುದನ್ನು ಬಿಟ್ಟುಬಿಟ್ಟರು. ರಾಜ ಕೂಡಲೇ ಮಂತ್ರಿ ಇದ್ದಲ್ಲಿಗೆ ಬಂದು ಅವನನ್ನು ಮೇಲೆತ್ತಿದನು. ಮಂತ್ರಿ ನೀವು ಹೇಳಿದ್ದು ನಿಜ. ನನ್ನ ಬೆರಳು ಹೋಗಿದ್ದರಿಂದಲೇ ಇದು ನಾನು ಬದುಕಿ ಬಂದೆ. ನಾವು ನಿಮ್ಮನ್ನು ಗುಂಡಿಗೆ ತಳ್ಳಬಾರದಿತ್ತು ಎಂದನು.

ಆಗ ಮಂತ್ರಿಯೂ ನೀವು ನಮ್ಮನ್ನು ಗುಂಡಿಗೆ ತಳ್ಳಿದ್ದು ಸಹ ಒಳ್ಳೆಯದೇ ಆಯಿತು ಎಂದನು .ಅದು ಹೇಗೆ ಎಂದು ರಾಜ ಕೇಳಿದ ನಾವಿಬ್ಬರು ಜೊತೆಯಾಗಿದ್ದರೆ, ನಿಮ್ಮನ್ನು ಬಿನ್ನ ಎಂದು ಬಿಟ್ಟು, ಎಲ್ಲಾ ಅಂಗಾಂಗಗಳು ಸರಿಯಾಗಿರುವ ನನ್ನನ್ನು ಅಲ್ಲಿಯೇ ಬಲಿ ಕೊಡುತ್ತಿದ್ದರು ಎಂದಾಗ, ರಾಜ ಮಂತ್ರಿಯಾ ಬುದ್ಧಿ ಶಕ್ತಿಯನ್ನು ಮೆಚ್ಚಿದನು. ನಂತರ ಅಲ್ಲಿಂದ ರಾಜಕ್ಕೆ ಹಿಂದಿರುಗಿದರು. ಮನುಷ್ಯರಿಗೆ ಅನೇಕ ಕಷ್ಟಗಳು ಬರುತ್ತವೆ ಸುಖಗಳು ಬರುತ್ತೇವೆ. ನೋವುಗಳು ಬರುತ್ತವೆ ನಲಿವುಗಳು ಬರುತ್ತವೆ. ಇವೆಲ್ಲವುಗಳನ್ನು ನಮ್ಮ ಬದುಕಿನ ಪರೀಕ್ಷೆಗಳೆಂದು ತಿಳಿದುಕೊಳ್ಳಬೇಕು. ಎಲ್ಲವುಗಳನ್ನು ಅನುಭವಿಸಿ ಗಟ್ಟಿಗೊಳ್ಳಲೇಬೇಕು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ , ಅರ್ಜುನನಿಗೆ ಹೇಳಿದಂತೆ ಆಗೋದೆಲ್ಲ ಒಳ್ಳೆಯದಕ್ಕೆ ಎಂದು ತಿಳಿಯಬೇಕು.

**– ಎಚ್ ಅನಿತಾ, 9ನೇ ತರಗತಿ**
**ಸರ್ಕಾರಿ ಪ್ರೌಢಶಾಲೆ ಬ್ಯಾಸಿಗೆ ದೇರಿ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಣ್ಣದ ಹಬ್ಬ ಹೋಳಿ

ಬದುಕೆಂಬುದು ಬಿಳಿಯಪಟ ಇದ್ದಂತೆ. ಇಲ್ಲಿ ವಿಶ್ವಾಸವೆಂಬ ಕುಂಚದಿಂದ ಭಾವನೆಗಳೆಂಬ ರಂಗನ್ನು ಮೂಡಿಸುತ್ತ ಜೀವನದ ಚಿತ್ರವನ್ನು ರಚಿಸಬೇಕು. ಕಾಮನಬಿಲ್ಲಿನಲ್ಲಿ ಹೇಗೆ ಏಳು ಬಣ್ಣಗಳಿರುತ್ತದೆಯೋ ಹಾಗೆ ಮನಸಲ್ಲಿ ಪ್ರೀತಿ ಮಮತೆ ಭ್ರಾತೃತ್ವ ಮೊದಲಾದ ಸದ್ಭಾವನೆಗಳ ಬಣ್ಣಗಳನ್ನು ಮೂಡಿಸಿಕೊಳ್ಳಬೇಕು

ಬಣ್ಣಗಳು ನಮ್ಮ ಬದುಕಿನ ರಂಗನ್ನು ಹೆಚ್ಚಿಸುತ್ತವೆ . ಕೆಂಪು ಪ್ರೀತಿಯ ಸಂಕೇತ ವಾದರೆ ಹಸಿರು ಸಮೃದ್ಧಿಯನ್ನು ಸೂಚಿಸುತ್ತದೆ ,ಗುಲಾಬಿ ಬಣ್ಣ ಸ್ನೇಹವನ್ನು ಕಿತ್ತಳೆ ಬಣ್ಣ ಜ್ಞಾನವನ್ನು ಹಳದಿ ಬಣ್ಣವು ಸಂಭ್ರಮವನ್ನು ಹಾಗೂ ನೇರಳೆ ಬಣ್ಣವು ಸಂಪತ್ತನ್ನು ಸೂಚಿಸುತ್ತದೆ , ಬಿಳಿಯ ಬಣ್ಣವು ಶಾಂತಿಯ ದ್ಯೋತಕ .

ಬಣ್ಣಗಳ ಹಬ್ಬ ಹೋಳಿಯು ಫಾಲ್ಗುಣಮಾಸದ ಪೌರ್ಣಮಿಯಂದು ಆರಂಭವಾಗುತ್ತದೆ . ಎರಡು ದಿನಗಳ ಕಾಲ ಆಚರಿಸಲಾಗುತ್ತದೆ . ಮೊದಲ ದಿನ ಕೆಟ್ಟ ಶಕ್ತಿ , ಅಸೂಯೆ , ದ್ವೇಷಗಳೆಲ್ಲಾ ಸುಟ್ಟುಹೋಗಲಿ ಎಂದು ಹೋಳಿ ದಹನ ಮಾಡುತ್ತಾರೆ. ಎರಡನೇ ದಿನ ಪ್ರೀತಿ , ವಿಶ್ವಾಸ, ಸಂತೋಷ, ಸಂಪತ್ತು ಹೆಚ್ಚಾಗಲಿ ಎಂದು ವಿಧ ವಿಧದ ಬಣ್ಣಗಳನ್ನು ಎರಚುತ ಸಿಹಿಯನ್ನು ತಿನ್ನಿಸುತ್ತಾ ಬಣ್ಣ ಬಣ್ಣದ ರಂಗೋಲಿಯನ್ನು ಹಾಕಿ ಸಂಭ್ರಮಿಸುತ್ತಾರೆ

ಬಣ್ಣದ ಹಬ್ಬವನ್ನು ಆಚರಿಸಲು ವಯಸ್ಸಿನ ಬೇಧವಿಲ್ಲ. ಎಲ್ಲಾ ವಯಸ್ಸಿನವರು ಒಬ್ಬರಿಗೊಬ್ಬರು ಬಣ್ಣಗಳನ್ನು ಹಚ್ಚುತ್ತಾ ಸಂಭ್ರಮಿಸುತ್ತಾರೆ. ಮಕ್ಕಳ ಖುಷಿಗಂತೂ ಪಾರವೇ ಇಲ್ಲ. ಹಬ್ಬದ ಹಿಂದಿನ ದಿನವೇ ಅಪ್ಪ ಅಮ್ಮನಿಗೆ ಹೇಳಿ ಎಲ್ಲಾ ತರಹದ ಬಣ್ಣವನ್ನು ತರಿಸಿಕೊಂಡು ಬಣ್ಣದಾಟವನ್ನು ಆಡಲು ಉತ್ಸಾಹದಿಂದ ಕಾಯುತ್ತಾ ಇರುತ್ತಾರೆ.

ಮಕ್ಕಳು ಸ್ನೇಹಿತರೊಡನೆ ಸೇರಿಕೊಂಡು ಒಂದು ದೊಡ್ಡ ಬಕೇಟಿನಲ್ಲಿ ನೀರು ಇಟ್ಟುಕೊಂಡು, ಅದಕ್ಕೆ ಬಗೆ ಬಗೆಯ ಬಣ್ಣಗಳನ್ನೆಲ್ಲಾ ಮಿಶ್ರಣ ಮಾಡಿ ಪಿಚಕಾರಿ ತೆಗೆದುಕೊಂಡು ಒಬ್ಬರಿಗೊಬ್ಬರು ಆ ನೀರನ್ನು ಹಾರಿಸಿಕೊಂಡು ಆಡುವ ಪರಿಯನ್ನು ನೋಡುವುದೇ ನಮಗೆ ಒಂದು ಸಂಭ್ರಮ.

ಈ ಹಬ್ಬವನ್ನು ಆಚರಿಸುವ ಹಿಂದೆ ಎರಡು ಪುರಾಣದ ಕಥೆ ಇದೆ ಎಂದು ಹಿರಿಯರು ಹೇಳುತ್ತಾರೆ.

ಹಿರಣ್ಯಕಶಿಪು ತನ್ನ ಮಗ ಹರಿಭಕ್ತನಾದ ಪ್ರಹ್ಲಾದನ ಮನಸ್ಸನ್ನು ಒಲಿಸಲು ಸೋತುಹೋದಾಗ, ಏನಾದರೂ ಮಾಡಿ ಪ್ರಹ್ಲಾದನನ್ನು ಹರಿಯ ಭಕ್ತಿಯಿಂದ ವಿಚಲಿತನನ್ನಾಗಿ ಮಾಡಬೇಕೆಂದು ತೀರ್ಮಾನಿಸಿ, ಹಿರಣ್ಯಕಶಿಪು ತನ್ನ ಸಹೋದರಿಯಾದ ಹೋಳಿಕಾಳ ಸಹಾಯ ಯಾಚಿಸುತ್ತಾನೆ. ಅವಳು ಅಗ್ನಿನಿರೋದವುಳ್ಳ ಬಟ್ಟೆಯನ್ನು ತೊಟ್ಟು ಪ್ರಹ್ಲಾದನನ್ನು ಎತ್ತಿಕೊಂಡು ಬೆಂಕಿಯನ್ನುಪ್ರವೇಶಿಸುತ್ತಾಳೆ. ಆದರೆ ಬಟ್ಟೆ ಗಾಳಿಗೆ ಹಾರಿಹೋಗಿ ಅವಳೇ ಅಗ್ನಿಗೆ ಆಹುತಿಯಾಗುತ್ತಾಳೆ. ಪ್ರಹ್ಲಾದ ಹರಿಯ ಕೃಪೆಯಿಂದ ಸುರಕ್ಷಿತನಾಗುತ್ತಾನೆ. ಹೊಳಿಕಾ ಸುಟ್ಟುಹೋದ ಹಿನ್ನೆಲೆಯಲ್ಲಿ ದುಷ್ಟ ಶಕ್ತಿ ದಹನವಾಗಲಿ ಎಂದು ಹೋಳಿ ದಹನ ಮಾಡುತ್ತಾರೆ ಎಂಬ ಜಾನಪದ ಕಥೆ ಇದೆ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

ಇನ್ನೊಂದು ಪುರಾಣ ಕಥೆಯ ಪ್ರಕಾರ ಸತಿ ದೇವಿಯ ವಿಯೋಗದಿಂದ ದುಃಖ ತಪ್ತನಾದ ಶಿವನು ಗಾಢ ತಪಸ್ಸಿನಲ್ಲಿ ಮುಳುಗುತ್ತಾನೆ. ಇತ್ತ ಅಸುರರ ಉಪಟಳ ಜಾಸ್ತಿಯಾಗಿ ತಾರಾಕಾಸುರನು ಶಿವನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಆತನ ಕಲ್ಯಾಣವಾಗಿ ಜನಿಸುವ ಪುತ್ರನಿಂದಲೇ ತನಗೆ ಮರಣ ಪ್ರಾಪ್ತಿಯಾಗಬೇಕೆಂದು ಬ್ರಹ್ಮನಿಂದ ವರ ಪಡೆಯುತ್ತಾನೆ . ದೇವತೆಗಳನ್ನು ಸೋಲಿಸಿ ತನ್ನ ಅಡಿಯಾಳಾಗಿಸಿಕೊಂಡು ದರ್ಪ ಮೆರೆಯುತ್ತಾನೆ . ಎಲ್ಲ ದೇವತೆಗಳು ಪರಿಹಾರಕ್ಕೆ ಪ್ರಾರ್ಥಿಸುತ್ತಾರೆ . ಆಗ ಸತಿಯು ಮರುಜನ್ಮ ಪಡೆದು ಹಿಮವಂತನ ಮಗಳು ಪಾರ್ವತಿಯಾಗಿ ಶಿವನ್ನನ್ನೇ ವರಿಸುವ ಬಯಕೆಯನ್ನು ಹೊಂದುತ್ತಾಳೆ . ಹೇಗಾದರೂ ಶಿವ ಪಾರ್ವತಿಯರ ಕಲ್ಯಾಣಕ್ಕೆ ಬದ್ಧರಾದ ದೇವತೆಗಳು ಇಂದ್ರನ ಆಣತಿಯಂತೆ ಪಾರ್ವತಿಯು ಶಿವನ ಮುಂದೆ ಬಂದಾಗ ಮನ್ಮಥನು ಹೂಬಾಣ ಬಿಟ್ಟು ಶಿವನಲ್ಲಿ ಪಾರ್ವತಿಯ ಮೇಲೆ ಅನುರಾಗ ಮೂಡಿಸಲು ಪ್ರಯತ್ನಿಸುತ್ತಾನೆ . ಆದರೆ ಕೋಪಗೊಂಡ ಶಿವನು ತನ್ನ ಮೂರನೆಯ ಕಣ್ಣನ್ನು ತೆರೆದು ಮನ್ಮಥನನ್ನು ದಹಿಸುತ್ತಾನೆ . ಆದರೆ ರತಿ ದೇವಿಯ ಪ್ರಾರ್ಥನೆಗೆ ಕರಗಿ ಮುಂದೆ ಪಾರ್ವತಿಯ ಕಲ್ಯಾಣವಾದ ಮೇಲೆ ಆತನು ಹುಟ್ಟಿ ಬರುತ್ತಾನೆಂದು ಹೇಳುತ್ತಾನೆ. ಕಾಮನನ್ನು ಶಿವನು ತನ್ನ ಅಗ್ನಿನೇತ್ರದಿಂದ ದಹಿಸಿದ ದಿನವನ್ನೇ ಹೋಳಿಹುಣ್ಣಿಮೆಯಾಗಿ ಆಚರಿಸಲಾಗುತ್ತದೆ. ಇತ್ತ ಶಿವನು ತನ್ನ ರೂಪ ಲಾವಣ್ಯಕ್ಕೆ ಮನಸೋಲುವನಲ್ಲ ಎಂದರಿತ ಪಾರ್ವತಿ ಕಠಿಣ ತಪಸ್ಸನ್ನು ಆಚರಿಸಿ ಆತನ ಮನಗೆಲ್ಲುತ್ತಾಳೆ . ಶಿವ ಪಾರ್ವತಿಯರ ಕಲ್ಯಾಣವಾಗುತ್ತದೆ . ಕಾರ್ತಿಕೇಯನ ಜನನವಾಗಿ ಮುಂದೆ ಈತನ ನೇತೃತ್ವದಿಂದ ತಾರಕಾಸುರನ ವಧೆಯಾಗಿ ಲೋಕ ಕಲ್ಯಾಣವಾಗುತ್ತದೆ.

ಹೋಳಿ ಹಬ್ಬವನ್ನು ದೇಶದಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ . ಡೆಲ್ಲಿ, ಉತ್ತರ ಪ್ರದೇಶ , ಗುಜರಾತ್ ರಾಜ್ಯಗಳಲ್ಲಿ ಪರಸ್ಪರ ಬಣ್ಣ ಎರಚಿ ಓಕುಳಿಯಾಡಿ ಹೋಳಿಯನ್ನು ಆಚರಿಸಿದರೆ ಪಂಜಾಬದಲ್ಲಿ ಸಮರ ಕಲೆಗಳ ಪ್ರದರ್ಶನ



ಏರ್ಪಡಿಸುತ್ತಾರೆ . ದಕ್ಷಿಣ ಭಾರತದಲ್ಲಿ ಕಾಮನ ಪ್ರತಿಕೃತಿಯನ್ನು ಮಾಡಿ ಅದನ್ನು ದಹಿಸಿ ಅರಿಷಡ್ವರ್ಗದಲ್ಲಿ ಮುಖ್ಯವಾದ ಕಾಮವನ್ನು ಜ್ಞಾನಾಗ್ನಿಯಿಂದ ದಹಿಸಿದ ಸಂಕೇತವಾಗಿ ಆಚರಿಸುತ್ತಾರೆ . ಹೋಳಿ ಹಬ್ಬ ನಮ್ಮ ಅರಿವಿನ ವ್ಯಾಪ್ತಿಯನ್ನು ಹಾಗೂ ಪರಸ್ಪರ ಬಣ್ಣ ಎರಚುವುದರ ಮೂಲಕ ಪ್ರೀತಿ ಪ್ರೇಮದ ಹಂಚುವಿಕೆಯನ್ನೂ ಸಾರುತ್ತದೆ

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ರಾಸಾಯನಿಕವಾದ ಬಣ್ಣಗಳನ್ನು ಬಳಸುವುದರಿಂದ ಚರ್ಮದಲ್ಲಿ ಗುಳ್ಳೆಗಳು, ತುರಿಕೆಗಳು, ಬಣ್ಣ ಹಾರಿಸುವಾಗ ಕಣ್ಣಿಗೆ ಹಾರಿದರೆ ಕಣ್ಣಿನ ಅಲರ್ಜಿ, ಹಾಗೇ ಕೂದಲಿಗೆ ಜಾಸ್ತಿ ಬಣ್ಣ ಬಿದ್ದರೆ ಕೂದಲು ಉದುರುವುದು, ಉಸಿರಾಟದ ತೊಂದರೆ ಹೀಗೆ ಬೇರೆ ಬೇರೆ ಸಮಸ್ಯೆ ಕಾಣಿಸುತ್ತದೆ.

ಇದರಿಂದ ಸ್ವಲ್ಪ ಎಚ್ಚರವಹಿಸಿ ನೈಸರ್ಗಿಕ ಬಣ್ಣ ವನ್ನ ಬಳಸುವುದು ಉತ್ತಮ. ಬದುಕೇ ಒಂದು ರಂಗಿನ ರಂಗೋಲಿ.ಬದುಕು ರಂಗು ರಂಗಾಗಿ ಇರಬೇಕು ಎಂದು ಬಯಸುವುದು ಮನುಷ್ಯ ನ ಸಹಜ ಧರ್ಮ. ಆದರೆ ರಂಗಿನ ಬದುಕಿಗೆ ಒಂದು ಮಿತಿ ಇರಬೇಕು.

ಒಟ್ಟಿನಲ್ಲಿ ಬಣ್ಣಗಳ ಲೋಕದಲ್ಲಿ ಸುಮಧುರವಾದ ಭಾವನೆಗಳನ್ನು, ಎಲ್ಲರಲ್ಲೂ ಬಂಧುತ್ವನ್ನು ಬೆಳೆಸಿಕೊಳ್ಳುತ್ತಾ ಉತ್ತಮವಾದ ಬದುಕನ್ನು ಕಟ್ಟಿಕೊಳ್ಳೋಣ.

# ಸೋಲು - ಗೆಲುವು ಮತ್ತು ಜೀವನ

ಸೋಲೇ ಗೆಲುವಿನ ಸೋಪಾನ... ಸತತ ಪ್ರಯತ್ನವೇ ಸಾಧನೆಯ ಹಾದಿ..... ಎಂಬ ಮಾತಿನಂತೆ ನಾವು ಪುರಾತನ ಕಾಲದಿಂದಲೂ ನೋಡಿ ಬಂದಂತಹ ಎಲ್ಲಾ ವಿಚಾರಗಳು ಸೋಲು ಗೆಲುವಿನದಾಗಿದೆ. ಸೋಲು ಗೆಲುವಿನ ಆಟದಲ್ಲಿ ನಮ್ಮ ಮಹಾ ಕಾವ್ಯಗಳಾದ... ರಾಮಾಯಣ ಮತ್ತು ಮಹಾಭಾರತ ಹೊರತೆನಲ್ಲ. ನಮ್ಮ ಇತಿಹಾಸದ ಪುಟಗಳ ತಿರುಗಿ ನೋಡುವ ನೋಟವೇ ಸೋಲು– ಗೆಲುವಿನ ಚಿತ್ರಣ.... ನಮ್ಮ ಜೀವನ ನೀರಿನ ಮೇಲಿನ ಗುಳ್ಳೆಯ ಪಯಣದಂತೆ ಈ ಪಯಣದಲ್ಲಿ ನಮ್ಮ ದಾರಿ ಸರಾಗವಾಗಿರಬಹುದು ಅಥವಾ ಕಷ್ಟವಾಗಿರಬಹುದು. ಆದರೆ ಜೀವನದ ರಥಯಾತ್ರೆ ನಿಗದಿತ ಕಾಲದವರೆಗೆ ಸಾಗುತ್ತಲೇ ಇರುತ್ತದೆ. ಜೀವನ ಅನ್ನುವುದು ಸೋಲು ಗೆಲುವಿನ ಆಟ, ಗೆದ್ದವನಿಗೆ ಸೋಲಬಾರದೆಂಬ ಭಯ ಇದ್ದರೆ, ಸೋತವನಿಗೆ ಗೆಲ್ಲ ಬೇಕೆಂಬ ಛಲವಿರುತ್ತದೆ. ಇದು ಸೋಲು ಗೆಲುವಿನ ಜೀವನ.

ಜೀವನ ಎಂದರೆ ಸ್ಪರ್ಧೆಯ ಜೊತೆಗಿನ ಪಯಣ. ಈ ಸ್ಪರ್ಧೆಯಲ್ಲಿ ಸೋಲು ಗೆಲುವು ಎರಡು ಸ್ಪರ್ಧೆಯ ಅಂಗ. ನಮ್ಮ ಜೀವನ ದಲ್ಲಿ ಯಾವಾಗಲೂ ಗೆಲುವು ಇರುತ್ತದೆ. ಲಾಭ ಇರುತ್ತದೆ. ಶ್ರೀಮಂತಿಕೆ ಇರುತ್ತದೆ. ಸನ್ಮಾನಗಳು ಇರುತ್ತವೆ. ಎಂಬುದು ಶುದ್ಧ ಸುಳ್ಳು.



ಡಾ ಪ್ರಸನ್ನ ನಾಡಿಗರ್
ಶಿಕ್ಷಕರು ಕೂಡ್ಲಿಗಿ

ಜೀವನ ಎಂದ ಮೇಲೆ ಎಲ್ಲಾ ನೋವು ನಲಿವುಗಳ ಮಿಶ್ರಣ. ಒಮ್ಮೆ ಗೆಲುವು ಬರುತ್ತದೆ. ಒಮ್ಮೆ ಸೋಲು ಬರುತ್ತದ,ಒಮ್ಮೆ ಲಾಭವಾಗುತ್ತದೆ... ಒಮ್ಮೆ ಹಾನಿಯೂ ಆಗುತ್ತದೆ ಒಮ್ಮೆ ಸನ್ಮಾನನೂ ಸಿಗುತ್ತದೆ. ಒಮ್ಮೆ ಅಪಮಾನವೂ ಸಿಗುತ್ತದೆ... ಶ್ರೀಮಂತಿಕೆಯು ಬರುತ್ತದೆ. ಬಡತನವೂ ಬರುತ್ತದೆ. ಇವೆರಡರ ಮಧ್ಯದಲ್ಲಿ ಮನುಷ್ಯ ಸಂತೋಷವಾಗಿ ಬದುಕಲು ಕಲಿಯಬೇಕು. ಆದರೆ ಇವತ್ತಿನ ಕಾಲದಲ್ಲಿ ಗೆಲುವನ್ನು ಪಡೆಯುವುದಕ್ಕೋಸ್ಕರ ಅನ್ಯಾಯ ಮತ್ತು ದ್ರೋಹ ಮಾಡಲು ಹೊರಟಿದ್ದೇವೆ. ಇದು ನಿಜವಾದ ಗೆಲುವು ಅಲ್ಲ. ನಮ್ಮ ಗೆಲುವು ಹೇಗಿರಬೇಕೆಂದರೆ ಸೋತವರು ಕೂಡ ನಮ್ಮ ಗೆಲುವನ್ನು ಆನಂದಿಸಿ. ಸಂಭ್ರಮಿಸುವಂತಿರಬೇಕು. ಅಂತಹ ಗೆಲುವು ನಮ್ಮದಾಗಬೇಕು

ಅನೇಕರು ಸೋಲಿಗೆ ಅಂಜುತ್ತಾರೆ. ಅಳುಕುತ್ತಾರೆ ಮತ್ತು ಎದುರುತ್ತಾರೆ. ಇಂಥವರು ಯಾವಾಗಲೂ ಸ್ಪರ್ಧೆಯಿಂದ ದೂರನೇ ಇರುತ್ತಾರೆ ಇವರು ತಮ್ಮ ಜೀವನದಲ್ಲಿ ಮಾಡುವಂತಹ ಬಹುದೊಡ್ಡ ತಪ್ಪು. ನಮ್ಮ ಹಳ್ಳಿಗಳಲ್ಲಿ ಹಿರಿಯರು ಹೇಳುತ್ತಿದ್ದರು. ನೀರಿಗೆ ಇಳಿದಾಗಲೇ ಈಜು ಕಲಿಯಲು ಸಾಧ್ಯ, ನೀರಿಗೆ ಇಳಿಯದೇ ಈಜು ಬರಲಿ ಎಂದು ಬಯಸಿದರೆ ಹೇಗೆ....? ಅದು ಸಾಧ್ಯವಿಲ್ಲದ ಮಾತು ಹಾಗೆಯೇ ಸೋಲಿಗೆ ಎದುರದೆ ಅಂಜದೆ ಅಳುಕದೆ ಮುನ್ನುಗ್ಗಬೇಕು ಆಗ ಜೀವನದಲ್ಲಿ ಮುಂದೆ ಬರಲು ಸಾಧ್ಯ.

ಪ್ರಸ್ತುತ ದಿನಗಳು... ಇದು ಸ್ಪರ್ಧಾತ್ಮಕ ಯುಗ ಎಂದರೆ ತಪ್ಪಾಗಲಾರದು. ಇಲ್ಲಿ ಗೆಲ್ಲುವ ಕುದುರೆಗೆ ಗೌರವ ಬೆಲೆ ಜಾಸ್ತಿ ಹಾಗಂತ ಸೋತವರನ್ನು ತುಚ್ಚವಾಗಿ ಕಾಣಬಾರದು. ಏಕೆಂದರೆ ಗೆದ್ದವರೆಲ್ಲ ಸೋಲನ್ನ ಕಂಡವರಾಗಿದ್ದಾರೆ. ಗೆದ್ದವರಿಗೆ ಸೋಲಿನ ರುಚಿ ತಿಳಿದಿರುತ್ತದೆ. ಗೆಲುವಿನ ಅಡಿಪಾಯವೇ ಸೋಲು. ಏಕೆಂದರೆ ಗೆದ್ದವರಿಗೂ ಕೂಡ ಸೋಲಿನ ರುಚಿ ತಿಳಿದಿರುತ್ತದೆ.. ಸೋಲು ಗೆಲುವಿನ ಆಟದಲ್ಲಿ ಸೋಲಿನ ಅನುಭವವೇ ನಿಜವಾದ ಅನುಭವ. ಗೆಲುವು ಒಂದು ಅನುಭವವೇ.... ಆದರೆ ಸೋಲಿನ ಅನುಭವ.. ಮನುಷ್ಯನನ್ನು ಪರಿಪಕ್ವತೆ ಪರಿಪೂರ್ಣ ವ್ಯಕ್ತಿಯಾಗಿ ಬೆಳೆಯುವುದಕ್ಕೆ ಸಹಾಯಕವಾಗುತ್ತದೆ

ಗೆದ್ದಾಗ ಹಿಗ್ಗದೆ ಸೋತಾಗ ಕುಗ್ಗದೆ ಮುನ್ನಡೆಯಬೇಕು. ಸ್ಪರ್ಧೆ ಎಂದ ಮೇಲೆ ಸೋಲು ಗೆಲುವು ಸಹಜ. ಸೋಲಿಗೆ ಹೆದುರಿ ಮೂರ್ಖತನದಿಂದ ಸ್ಪರ್ಧೆಯಿಂದ ದೂರ ಉಳಿಯಬಾರದು. ಥಾಮಸ್ ಅಲ್ವಾ ಎಡಿಸನ್ ಬಲ್ಬ್ ತಯಾರಿಸುವಾಗ ಸಾರಿ ವಿಫಲನಾಗುತ್ತಾನೆ. ಆಗಂತ ಅಲ್ಲಿಗೆ ಕೈ ಬಿಡಲಿಲ್ಲ. ವಿಫಲದ ಅನುಭವವನ್ನು ಬಳಸುತ್ತಾ ಕೊನೆಯ ಬಾರಿಗೆ ಗೆಲುವನ್ನು ಕಂಡು ಇವತ್ತು ಜಗತ್ತಿಗೆ ಗೆಲುವಿನ ಗೆಲುವನ್ನು ತೋರಿಸಿದ ಅದಕ್ಕೆ ಮುಖ್ಯ ಕಾರಣವೇ ಸೋಲು.

ಪ್ರಸ್ತುತ ದಿನಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ಸ್ಪರ್ಧೆ ಇದ್ದೇ ಇರುತ್ತದೆ. ಈ ಸ್ಪರ್ಧೆಯನ್ನು ಎದುರಿಸಬೇಕೆಂದರೆ ನಾವು ನಮ್ಮ ಶಕ್ತಿ..ಯುಕ್ತಿಗೆ ಮೀರಿ ಪ್ರಾಮಾಣಿಕವಾಗಿ ಸತ್ಯದ ಹಾದಿಯಲ್ಲಿ ನಮ್ಮ ಪ್ರಯತ್ನ ಮಾಡಬೇಕು. ಅಬ್ರಹಾಂ ಲಿಂಕನ್ ರಾಷ್ಟ್ರದ ಅಧ್ಯಕ್ಷರಾಗುವ ಮುನ್ನ ಎಷ್ಟೋ ಬಾರಿ ಸೋತರು. ಕೊನೆಗೆ ಒಂದು ದಿನ ಗೆದ್ದರು. ಹಾಗೆ ನಮ್ಮ ಗೆಲುವಿನ ಹಾದಿಯಲ್ಲಿ ಫಲಾಪೇಕ್ಷೆ ಪಡದೆ ನಮ್ಮ ಶಕ್ತಿ ಪೂರ್ಣ ಬಳಸಿಕೊಂಡು ನಿಷ್ಠೆಯಿಂದ ಕೆಲಸದಲ್ಲಿ ತೊಡಗಬೇಕು.

ಪ್ರಪಂಚದಲ್ಲಿ ಅನೇಕ ಸಾಧಕರು ಇದ್ದಾರೆ. ಅವರು ಕೂಡ ಸಾಧನೆಯ ಶಿಖರ ಏರುವ ಮುನ್ನ ಹಲವು ಬಾರಿ ಸೋತಿದ್ದಾರೆ. ಆ ಸೋಲುಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮುಂದೆ ಸಾಗಿ ಇತಿಹಾಸವಾಗಿದ್ದಾರೆ.

ಸೋಲು ಗೆಲುವಿನ ಆಟದಲ್ಲಿ ಗೆಲುವು ಕ್ಷಣಿಕ ಸಂತೋಷ ಕೊಡುತ್ತದೆ. ಆದರೆ ಸೋಲು ಶಾಶ್ವತವಾದ ಅನುಭವವನ್ನು ಕೊಡುತ್ತದೆ. ಮನುಷ್ಯ ತನ್ನ ಒಳ್ಳೆಯತನದಿಂದ ದೊಡ್ಡವನಾಗುತ್ತಾನೆ ಹೊರತು ಹುಟ್ಟಿನಿಂದಲ್ಲ. ಜೀವನದ ಸ್ಥಾನ ಮಾನವೂ ಬದಲಾಗುತ್ತಾ ಇರುತ್ತದೆ ಈ ಸತ್ಯ ಹರಿತು ನಾವು ನಡೆಯಬೇಕು. ಜೀವನದಲ್ಲಿ ನಾವು ಗೆದ್ದವರ ಕಥೆ ಓದುವುದಕ್ಕಿಂತ ಸೋತು ಗೆದ್ದವರ ಕಥೆ ಓದಬೇಕು ಜೀವನದಲ್ಲಿ ಸೋಲುವುದು ತಪ್ಪಲ್ಲ ಸೋಲುತ್ತೇನೆ ಎಂದು ಮೊದಲೇ ನಿರ್ಧರಿಸಿ ಪ್ರಯತ್ನ ಮಾಡದಿರುವುದು ಬಹುದೊಡ್ಡ ತಪ್ಪು. ಬಿದ್ದರೆ ಅವಮಾನವಿಲ್ಲ ಬಿದ್ದು ಮೇಲೆ ಏಳದಿದ್ದರೆ ಅವಮಾನ. ಕಷ್ಟಗಳು ಬರುತ್ತವೆ ಕಷ್ಟಗಳಲ್ಲಿ ಸೋಲುತ್ತೇವೆ ಎಂದು ಹಿಂದೆ ಸರಿದರೆ ಏನೂ ಸಾಧಿಸಲು ಸಾಧ್ಯವಿಲ್ಲ. ಸಣ್ಣ ಮಗು ಕೆಳಕ್ಕೆ ಬೀಳುತ್ತದೆ ಹಾಗೆ ಎದ್ದು ನಿಲ್ಲುತ್ತದೆ. ಹಾಗೆ ನಾವು ನಮ್ಮ ಬದುಕಲ್ಲಿ ಧೈರ್ಯವಾಗಿ ಮುಂದಕ್ಕೆ ಸಾಗಿದರೆ ಬದುಕಲ್ಲಿ ಏನನ್ನು ಬೇಕಾದರೂ ಸಾಧನೆ ಮಾಡಬಹುದು.

ಈ ಜೀವನ ಎಷ್ಟು ಅದ್ಭುತ ಎಂದರೆ ಗೆಲುವು ಈ ಪ್ರಪಂಚಕ್ಕೆ ನಮ್ಮನ್ನು ಪರಿಚಯಿಸುತ್ತದೆ. ಆದರೆ ಸೋತಾಗ ಸೋಲು ಈ ಪ್ರಪಂಚವನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಗೆದ್ದಾಗ ಅಹಂ ಪಟ್ಟವನು ಉಳಿಯಲಾರ. ಸೋತಾಗ ಕುಸಿದು ಹೋದವನು ಬೆಳೆಯಲಾರ. ಗೆಲುವಿನ ಸಂಭ್ರಮ ನೆತ್ತಿಗೆ ಏರದಿರಲಿ. ಸೋಲಿನ ನೋವು ಮನಸ್ಸಿಗೆ ತಾಗದಿರಲಿ ಹಿಗಿದ್ದಾಗ ಸೋಲು ಗೆಲುವಿನ ಜೀವನ ಸುಗಮವಾಗಿ ಸಾಗುತ್ತಾ ಗುರಿಯನ್ನು ತಲುಪುತ್ತದೆ. ಈ ಜೀವನದ ಸಾರ್ಥಕತೆ ಅಡಗಿರುವುದು ಒಳ್ಳೆಯತನದಲ್ಲಿ. ಅಹಂಕಾರ ತೊರೆಯಬೇಕು, ಎಲ್ಲರ ಒಳಗೆ ಒಂದಾಗಿ ಬಾಳಬೇಕು. ಅಧಿಕಾರ, ಕೀರ್ತಿ, ಅಂತಸ್ತು ಯಾವುದು ಶಾಶ್ವತವಲ್ಲ. ಈ ಜೀವ ಕೂಡ. ಈ ಸತ್ಯ ಹರಿತು ಒಳ್ಳೆಯತನದ ಹಾದಿಯಲ್ಲಿ ಸಾಗಬೇಕು....ಅಲ್ಲವೇ.....?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ನಿಮ್ಮನ್ನು ನೀವು ಪರಿಗಣಿಸಿ

ಬಹಳ ಹಳೆಯ ಕಥೆ ಇದು. ಒಂದೇ ಊರಿನ ಹತ್ತು ಜನ ಸ್ನೇಹಿತರು ತೀರ್ಥಯಾತ್ರೆಗೆ ತೆರಳಿದ್ದರು. ಸುಮಾರು ಆರು ತಿಂಗಳುಗಳ ಕಾಲ ತೀರ್ಥಯಾತ್ರೆಯನ್ನು ಪೂರೈಸಿ ಮರಳಿ ಊರಿಗೆ ಹೊರಟ ಸಮಯವದು. ಒಂದು ದಿನ ಮುಂಜಾನೆಯ ನಿತ್ಯವಿಧಿಗಳನ್ನು ಪೂರೈಸಿ ಅಡುಗೆ ಮಾಡಿಕೊಂಡು ಊಟ ಮಾಡಿ ಉಳಿದೆಲ್ಲ ಗಂಟು ಗದಡಿಗಳನ್ನು ಕಟ್ಟಿಕೊಂಡು ಅವರು ಹೊರಟರು. ಮಾರ್ಗಮಧ್ಯದಲ್ಲಿ ದೊಡ್ಡ ನದಿಯೊಂದನ್ನು ಅವರು ದಾಟಬೇಕಾಗಿತ್ತು. ನದಿಯೇನೋ ದೊಡ್ಡದು, ಆದರೆ ಬೇಸಿಗೆಯ ಕಾರಣ ನದಿಯ ಪಾತ್ರ ಕಿರಿದಾಗಿದ್ದು ಸೊಂಟದವರೆಗೂ ನೀರು ಇದ್ದ ಆ ನದಿಯನ್ನು ದಾಟಲು ಯಾವುದೇ ರೀತಿಯ ತೆಪ್ಪವಾಗಲಿ ದೋಣಿಯಾಗಲಿ ಇರಲಿಲ್ಲ.

ಪರಸ್ಪರ ತಾವು ತಾವೇ ಮಾತಾಡಿಕೊಂಡು ತಮ್ಮೆಲ್ಲ ಸಾಮಾನುಗಳನ್ನು ತಲೆಯ ಮೇಲೆ ಇಟ್ಟುಕೊಂಡು ಕೈ ಕೈ ಹಿಡಿದುಕೊಂಡು ಅವರೆಲ್ಲರೂ ನಿಧಾನವಾಗಿ ನದಿಯನ್ನು ದಾಟಿದರು. ಯಾವುದೇ ತೊಂದರೆ ಇಲ್ಲದೆ ಹರಿಯುವ ನದಿಯನ್ನು ದಾಟಿದ ಅವರು ಸಮಾಧಾನದ ನಿಟ್ಟುಸಿರು ಬಿಡುತ್ತಿರುವಾಗಲೇ ಅವರಲ್ಲೇ ಓರ್ವ ವ್ಯಕ್ತಿ ನಾವು ಒಟ್ಟು ಹತ್ತು ಜನರಿದ್ದೆವು. ಅಪ್ಪಿ ತಪ್ಪಿ ಯಾರಾದರೂ ನದಿಯಲ್ಲಿ ತೇಲಿಕೊಂಡು ಹೋಗಿದ್ದರೆ ಎಣಿಸಿ ನೋಡೋಣ ಎಂದು ಹೇಳಲು ಎಲ್ಲರೂ ಹೌದು ಹಾಗೆಯೇ ಮಾಡೋಣ ಎಂದು ತಲೆಯಾಡಿಸಿದರು.

ಇದೀಗ ಮೊದಲು ಹೇಳಿದ ವ್ಯಕ್ತಿ ತನ್ನನ್ನು ಬಿಟ್ಟು ಎಲ್ಲರನ್ನೂ ಎಣಿಸಿದಾಗ ಕೇವಲ ಒಂಬತ್ತು ಜನರಿದ್ದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅರೆ! ನಾವು ಕೇವಲ 9 ಜನರಿದ್ದೇವೆ... ಹಾಗಾದರೆ ನಮ್ಮಲ್ಲಿ ಒಬ್ಬ ವ್ಯಕ್ತಿ ನದಿಯಲ್ಲಿ ತೇಲಿ ಹೋಗಿರಬಹುದು ಎಂದು ಶಂಕಿಸಿ ಅವರೆಲ್ಲ ದುಃಖದಿಂದ ಜೋರಾಗಿ ಅಳಲಾರಂಭಿಸಿದರು. ಆ ಹಾದಿಯಲ್ಲಿ ಹೋಗುತ್ತಿದ್ದ ಓರ್ವ ವ್ಯಕ್ತಿ ಏನಾಯಿತು ಎಂದು ಕೇಳಲು ನಡೆದ ವಿಷಯವನ್ನು ಅವರೆಲ್ಲರೂ ಹೇಳಿದರು.

ಆಗ ಆ ವ್ಯಕ್ತಿ ನೀವು ಒಟ್ಟು ಹತ್ತು ಜನರೇ ಇರುವಿರಲ್ಲ ಎಂದು ಹೇಳಿದಾಗ ಅವರು ಮತ್ತೆ ತಮ್ಮಲ್ಲಿಯೇ ಎಣಿಸಿ ಇಲ್ಲ ನಾವು 9 ಜನರು ಇದ್ದೇವೆ. ನಮ್ಮಲ್ಲಿ ಒಬ್ಬರು ತೇಲಿಕೊಂಡು ಹೋಗಿದ್ದಾರೆ ಎಂದು ಮತ್ತೆ ದುಃಖಿಸಲಾರಂಭಿಸಿದರು. ಅದೆಷ್ಟೇ ತಿಳಿ ಹೇಳಿದರೂ ಅರಿಯದ ಅವರ ಮೌಢ್ಯವನ್ನು ಕಂಡು ಆ ವ್ಯಕ್ತಿ ತನ್ನಲ್ಲೇ ಗೊಣಗಿಕೊಳ್ಳುತ್ತಾ ಅಲ್ಲಿಂದ ಹೊರಟು ಹೋದನು.

ಕನ್ನಡಿಯ ಪರಿಚಯವೂ ಇಲ್ಲದ ಅವರ ಕಾಲದಲ್ಲಿ ಒಬ್ಬೊಬ್ಬರಾಗಿ ನೀರಿನಲ್ಲಿ ಇಳಿದು ತಮ್ಮ ಮುಖವನ್ನು ನೋಡಿಕೊಂಡು ತಮ್ಮಲ್ಲಿ ಯಾರು ಕಾಣೆಯಾಗಿದ್ದಾರೆ ಎಂದು ಚರ್ಚಿಸಿದರಾದರೂ ಅವರಿಗೆ ಗೊತ್ತಾಗಲೇ ಇಲ್ಲ. ಇದೀಗ ನದಿಯಲ್ಲಿ ತೇಲಿ ಹೋದ ವ್ಯಕ್ತಿಯ ಅವಶೇಷಗಳು ಸಿಗಬಹುದೇ ಎಂದು ನದಿಯಲ್ಲಿ ಹುಡುಕಲು ಪ್ರಯತ್ನಿಸಿದರು. ಯಾವ ಅವಶೇಷಗಳೂ ಅವರಿಗೆ ದೊರೆಯದೆ ಹೋಯಿತು. ಸತ್ತಿದ್ದರೆ ತಾನೇ ದೊರೆಯುವುದು!

ಇಲ್ಲಿ ಪ್ರತಿಯೊಬ್ಬರೂ ತಮ್ಮನ್ನು ಬಿಟ್ಟು ಉಳಿದ 9 ಜನರನ್ನು ಎಣಿಸುತ್ತಿದ್ದರು. ಹೀಗಾಗಿ ಕೇವಲ ಒಂಬತ್ತು ಜನರ ಲೆಕ್ಕ ಮಾತ್ರ ಸಿಗುತ್ತಿತ್ತು. ತಾನು ಹತ್ತನೆಯ ವ್ಯಕ್ತಿ ಎಂಬ ಅರಿವು ಅವರಿಗೆ ಆಗಲೇ ಇಲ್ಲ.

ಇವರಿಗೆ ಬುದ್ಧಿ ಹೇಳಲು ಪ್ರಯತ್ನಿಸಿ ಸೋತು ಹೋದ ದಾರಿಹೋಕ ವ್ಯಕ್ತಿ ಮತ್ತೆ ಬರಲು ಆತನಿಗೆ ನದಿಯಲ್ಲಿ ಯಾವ ಅವಶೇಷಗಳು ದೊರೆಯದ ಕುರಿತು ಈ ಹತ್ತು ಜನ ಹೇಳಲು ಆತ ಗಟ್ಟಿಯಾಗಿ ನಕ್ಕು ಹೀಗೆ ಹೇಳಿದನು 'ನೋಡಿ, ನಿಮ್ಮಲ್ಲಿ ಯಾರಾದರೂ ಒಬ್ಬರು ಮುಂದೆ ಬನ್ನಿ' ಎಂದು ಹೇಳಲು ಮೊದಲು ಎಲ್ಲರನ್ನು ಎಣಿಸಿದ ವ್ಯಕ್ತಿ ಮುಂದೆ ಬಂದನು.

ಕೂಡಲೇ ಆ ದಾರಿಹೋಕ ಮೊದಲು ನಿನ್ನನ್ನು ಗಣನೆಗೆ ತೆಗೆದುಕೊಂಡು ಎಣಿಸಿ ನಂತರ ಉಳಿದವರನ್ನು ಎಣಿಸು ಎಂದು ಹೇಳಿದನು. ದಾರಿಹೋಕನು ಹೇಳಿದಂತೆ ಮೊದಲ ವ್ಯಕ್ತಿ ತನ್ನನ್ನು ಮೊದಲನೇ ವ್ಯಕ್ತಿ ಎಂದು ಪರಿಗಣಿಸಿದಾಗ ಸರಿಯಾದ ಲೆಕ್ಕ ಅವರಿಗೆ ದೊರೆತು ತಾವು ಹತ್ತು ಮಂದಿ ಇರುವುದಾಗಿ ಅವರಿಗೆ ಅರಿವಾಯಿತು. ಅಲ್ಲಿಯೇ ಇದ್ದ ಇನ್ನೊಬ್ಬ ವ್ಯಕ್ತಿ , ಆಗಲೂ ನಾವು ಇಷ್ಟೇ ಜನ ಇದ್ದವು... ಆದರೂ ಅದು ಹೇಗೆ ಲೆಕ್ಕ ತಪ್ಪಿತು ಎಂದು ಕೇಳಿದನು.

ಉತ್ತರವಾಗಿ ದಾರಿಹೋಕನು "ನಿಜ, ಆಗಲೂ ನೀವು ಇಷ್ಟೇ ಜನ ಇದ್ದಿರಿ, ಆದರೆ ನೀವು ಉಳಿದವರೆಲ್ಲರನ್ನು ಪರಿಗಣಿಸಿ ನಿಮ್ಮನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ ಆದ್ದರಿಂದ ನಿಮ್ಮ ಗಣಿಸುವಿಕೆ ಒಂಬತ್ತು ಎಂದು ತೋರಿಸಿತ್ತು.... ಈಗಲಾದರೂ ಅರ್ಥವಾಯಿತಲ್ಲ ಎಂದಾಗ ಸಂತಸದಿಂದ ತಲೆಯಾಡಿಸಿದ ಅವರೆಲ್ಲ ಆತನಿಗೆ ಕೃತಜ್ಞತೆ ಹೇಳಿದರು.

ನಮ್ಮೆಲ್ಲರ ಬದುಕು ಹೀಗೆ ಅಲ್ಲವೇ ಸ್ನೇಹಿತರೆ? ನಾವು ಕೂಡ ಮೇಲಿನ ಹತ್ತು ಜನ ಸ್ನೇಹಿತರಲ್ಲಿ ಒಬ್ಬರಾಗಿದ್ದೇವೆ. ಬೇರೆಯವರನ್ನು ಪರಿಗಣಿಸುವ ನಾವು ವೈಯಕ್ತಿಕವಾಗಿ ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದೇ ಇಲ್ಲ. ನಮ್ಮ ಸುತ್ತಣ ಹತ್ತು ಹಲವು ಜನರ ಕುರಿತು ಯೋಚಿಸುವ,ಮಾತನಾಡುವ, ಕಾಳಜಿ ಮಾಡುವ ನಾವುಗಳು ಸ್ವತಹ ನಮ್ಮನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬೇರೆಯವರಿಗಾಗಿ ಭೂರಿ ಭೋಜನವನ್ನು ಸಿದ್ಧಪಡಿಸುವ ಹೆಣ್ಣು ಮಕ್ಕಳು ತಮಗೊಬ್ಬರಿಗೆ ಒಂದು ಬಟ್ಟಲು ಅನ್ನ ಮಾಡಿಕೊಳ್ಳುವುದಿಲ್ಲ. ಮನೆಯ ಪ್ರತಿ ಮೂಲೆ ಮುಡುಕುಗಳನ್ನು ಸ್ವಚ್ಛಗೊಳಿಸಿ ಮನೆಯನ್ನು ಲಕಲಕಿಸುವಂತೆ ಇಡುವ ಹೆಣ್ಣು ಮಕ್ಕಳು ತಮ್ಮ ವೈಯುಕ್ತಿಕ ಕಾಳಜಿಯ ವಿಷಯ ಬಂದಾಗ ಗಂಡನ, ಮಕ್ಕಳ ಮತ್ತು ಕುಟುಂಬದ ನೆಪವೊಡ್ಡಿ ಹಿಂದೇಟು ಹಾಕುತ್ತಾರೆ.

ಯಾರಿಗೇ ಆಗಲಿ ಅವಕಾಶಗಳು ಪದೇ ಪದೇ ದೊರೆಯುವುದಿಲ್ಲ, ಹಾಗೆ ದೊರೆತ ಅವಕಾಶಗಳನ್ನು ಬಿಟ್ಟುಬಿಡುವವರಿಗೆ ಮುಂದೆ ಅಂತಹ ಅವಕಾಶಗಳು ದೊರೆಯುತ್ತವೆಯೋ ಇಲ್ಲವೋ ಹೇಳಲು ಸಾಧ್ಯವಿಲ್ಲ. ಆದರೆ ಸಿಕ್ಕ ಅವಕಾಶಗಳನ್ನು ಕಳೆದುಕೊಂಡು ನಂತರ ಹಲಬುವ ಜನರಿಗೆ ಏನೆಂದು ಹೇಳಬೇಕು.

ಬಹುಶಹ ನಮ್ಮೆಲ್ಲರ ಬದುಕು ಹಾಗೆಯೇ ನಡೆಯುತ್ತಿದೆ. ಚಿಕ್ಕ ಮಕ್ಕಳಿದ್ದಾಗ ಯೌವನವನ್ನು ಬಯಸುವ ನಾವು ಯೌವ್ವನದಲ್ಲಿ ಜವಾಬ್ದಾರಿ ಮತ್ತು ಒತ್ತಡಗಳಿಲ್ಲದ ಮಧ್ಯ ವಯಸ್ಸನ್ನೂ ಮತ್ತು ಮಧ್ಯ ವಯಸ್ಸಿನಲ್ಲಿ ವೃದ್ಧಾಪ್ಯದ ಆರಾಮದಾಯಕ ಜೀವನವನ್ನು ಮತ್ತು ಅಂತಿಮವಾಗಿ ವೃದ್ಧಾಪ್ಯದಲ್ಲಿ ಬಾಲ್ಯದ ಜೀವನದ ಕನವರಿಸುತ್ತೇವೆ. ಇರುವಾಗ ಇದ್ದುದನ್ನು ಅನುಭವಿಸದೆ ಬೇರೊಂದಕ್ಕೆ ಆಶಿಸಿ ಅಲ್ಲಿಯೂ ಸಲ್ಲದ ಇಲ್ಲಿಯೂ ಸಲ್ಲದ ತ್ರಿಶಂಕು ಸ್ಥಿತಿಯಲ್ಲಿ ಉಳಿದುಬಿಡುತ್ತೇವೆ. ನಾವು ವರ್ತಮಾನದಲ್ಲಿ ಜೀವಿಸುವುದನ್ನೇ ಕಲಿತಿಲ್ಲ ಎಂಬಷ್ಟು ಭವಿಷ್ಯದ ಕುರಿತ ಯೋಜನೆ, ಭೂತದಲ್ಲಿ ನಡೆದುಹೋದ ಘಟನೆಗಳನ್ನು ಮತ್ತೆ ಮತ್ತೆ ನೆನಪಿನ ಅಂಗಳಕ್ಕೆ ತಂದು ನಿಟ್ಟುಸಿರು ಬಿಡುವ, ಗತವೈಭವಗಳನ್ನು ನೆನೆದು ಕಣ್ಣೀರಿಡುವ ನಮ್ಮ ಮನಸ್ಥಿತಿಗೆ ಏನೆನ್ನಬೇಕು?.

ನಾವು ಆರೋಗ್ಯವಾಗಿದ್ದರೆ, ನಾವು ಗಟ್ಟಿ ಮುಟ್ಟಾಗಿದ್ದು ನಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುವಷ್ಟು ಸಶಕ್ತರಾಗಿರಬೇಕು. ಎಲ್ಲರಿಗೂ ಎಲ್ಲವನ್ನೂ ಮಾಡುವ ನಾವು ನಮಗಾಗಿಯೂ ತುಸು ಸಮಯವನ್ನು ಮೀಸಲಿಡಬೇಕು. ನಾವು ಹುಟ್ಟುವುದಕ್ಕಿಂತ ಮುಂಚೆಯಿಂದಲೂ ಇರುವ ಈ ಪ್ರಪಂಚ ನಾವು ಸತ್ತ ನಂತರವೂ ಇರುತ್ತದೆ. ನಮ್ಮ ಇರುವಿಕೆಯೇ ನಗಣ್ಯವಾಗಿರುವ ಈ ಪ್ರಪಂಚದಲ್ಲಿ ಬೇರೆಯವರಿಗಾಗಿ ದುಡಿಯುವ ನಾವು ನಮ್ಮ ವೈಯುಕ್ತಿಕ ಕಾಳಜಿ, ಆಸೆ ಆಕಾಂಕ್ಷೆಗಳ ಪೂರೈಕೆಗಾಗಿ ನಮ್ಮ ಆರೋಗ್ಯ ಮತ್ತು ಹಿತ ಸಾಧನೆಗಾಗಿ ಬಳಸಲೇಬೇಕು. ನಮ್ಮ ಮನವ ದೈಹಿಕ ಆರೋಗ್ಯ ಸರಿಯಾಗಿಲ್ಲದಿದ್ದರೆ ನಾವು ಬೇರೆಯವರಿಗೆ ಏನು ಮಾಡಲು ಸಾಧ್ಯ?

ಬೇರೆಯವರ ಕಾಳಜಿಯಲ್ಲಿ ನಮ್ಮನ್ನು ನಾವು ಮರೆಯಬಾರದು ಎಂಬುದಕ್ಕೆ ಮೇಲಿನ ಕಥೆಯೇ ನಮ್ಮ ಬದುಕಿಗೆ ಉದಾಹರಣೆ ಯಾಗಬೇಕು.. ಏನಂತೀರಾ ಸ್ನೇಹಿತರೆ?

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE READERS

Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com

## ಕವಿ ಮನಸು

### ಕಾಮನ ಬಿಲ್ಲು

ಕಾಮನ ಬಿಲ್ಲು ಮೂಡಿದೆ ಬಾನಲಿ
ಬಿಸಿಲು ಮಳೆಯ ಸಂಗಮದಿ!
ಸಪ್ತ ರಂಗುಗಳ ಓಕುಳಿ ಚೆಲ್ಲಿದೆ
ಸೃಷ್ಟಿಲಿ ಭಾವ ವಿಹಂಗಮದಿ!!

ಭೂಮಿ-ಬಾನಿಗೂ ಕಮಾನಿನಂತೆ
ಮೂಡಿದೆ ಮೇಘದ ಅಂಚಿನಲಿ!
ಸರಿಯುವ ಸಮಯವು ನಿಂತಂತಿದೆ
ಬಿಲ್ಲನು ನುಂಗುವ ಸಂಚಿನಲಿ!!

ಹೋಳಿಹುಣ್ಣಿಮೆ ಹಬ್ಬದಲೊಮ್ಮೆ
ಓಕುಳಿಯಾಟವದು ಮಕ್ಕಳಿಗೆ!
ಸಹಜಭಾವದ ತೋರಣ ಕಟ್ಟಿದೆ
ಬದುಕಿನ ಎಡಬಲ ದ್ವಿಬಾಗಿಲಿಗೆ!!

– ಶಿವರಾಜ್ ವಿ. ಶಿಕ್ಷಕ
ಹೊಸಪೇಟೆ.

### ಏನು ಕೊಡುವೆ ಬಳುವಳಿ..?

ಬಂಗಾರದೊಡವೆಯಲಿ
ಶೃಂಗಾರ ಗೊಂಡಿರುವೆ
ಬಂಗಾರಿ ಮನಸೀಗ ಪುಳಕಗೊಂಡು
ಸಾಂಗತ್ಯ ಬಯಸುತ್ತ
ಸಂಗಾತಿ ಬರುತಿಹನೆ
ದಂಗಾಗಿ ಹೋಗುವನು ನಿನ್ನ ಕಂಡು

ಕೆಂಪಾದ ಉಡುಪುಟ್ಟು
ಕಂಪೀವ ಹೂ ಮುಡಿದು
ಸೊಂಪಾಗಿ ಕುಳಿತಿರುವೆ ಲಜ್ಜೆಯಿಂದೆ
ತಂಪಾದ ಕೋಣೆಯಲಿ
ತಂಪೀವ ಇನಿಯನಿಗೆ
ಇಂಪಾದ ರಾಗವಿದು ಹೃದಯದಿಂದೆ

ಒಲವೆಂಬ ನಶೆಯಲ್ಲಿ
ಕಳೆಯೇರಿ ಮೊಗದಲ್ಲಿ
ಚೆಲುವೀಗ ಇಮ್ಮಡಿಸಿ ಮನವ ಸೆಳೆವೆ
ಬಳೆಗಳನು ತೊಟ್ಟಿರುವೆ
ಚಳಿಯಲ್ಲು ಬೆವರಿರುವೆ
ಬಳುವಳಿಯ ಇನಿಯನಿಗೆ ಏನು ಕೊಡುವೆ ?॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಮಕ್ಕಳ ಭವಿಷ್ಯಕ್ಕಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಹೆಚ್.ವಿಜಯ ಕುಮಾರ್ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಪ್ತಸಮಾಲೋಚಕರು, ಗೃಹಪಾಲಕ, ಗೃಹಪಾಲಕಿಯರು ಹಾಗೂ ಸಿಬ್ಬಂದಿಗಳು ಮಕ್ಕಳನ್ನು ಅರ್ಥಮಾಡಿಕೊಂಡು ಅವರ ಉತ್ತಮ ಭವಿಷ್ಯಕ್ಕಾಗಿ ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ. ಹೆಚ್.ವಿಜಯ ಕುಮಾರ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ನೋಂದಾಣಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಬಿ.ಡಿ.ಡಿ.ಎಸ್ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ 'ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015, ದತ್ತು ಪ್ರಕ್ರಿಯೆ ಮತ್ತು ಮಕ್ಕಳ ರಕ್ಷಣೆ' ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳನ್ನು ಸಕರಾತ್ಮಕ ಕಾರ್ಯಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಬೇಕು. ಮಕ್ಕಳು ಸಂಸ್ಥೆಯಲ್ಲಿ ಇದ್ದಾಗ ಮತ್ತು ಶಾಲೆಗೆ ಹೊದಂತಹ ಸಂದರ್ಭದಲ್ಲಿ ಮಕ್ಕಳ ಮೇಲೆ ನಿಗಾ ಇಡಬೇಕು ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆನಾಗಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆ ಪೋಷಣೆಯಲ್ಲಿ ಸಿಬ್ಬಂದಿಗಳ ಪಾತ್ರ ಬಹು ಮುಖ್ಯವಾಗಿದೆ. ಮಕ್ಕಳ ಪ್ರತಿಯೊಂದು ವೈಯಕ್ತಿಕ ಕಡತ ನಿರ್ವಹಿಸುವ ಕುರಿತು ಹಾಗೂ ಮಕ್ಕಳೊಂದಿಗೆ ಸಮಲೋಚನೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಬೇಕಾಗಿರುವುದರಿಂದ ತರಬೇತಿ ಹೊಂದಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಜಲಾಲಪ್ಪ ಅವರು ಮಾತನಾಡಿ, ತರಬೇತಿಯಲ್ಲಿ ಭಾಗಿದಾರರು ಹೆಚ್ಚಿನ ಮಾಹಿತಿ ಪಡೆದುಕೊಳ್ಳಬೇಕು. ತಮ್ಮ ದೈನಂದಿನ ಕಾರ್ಯಚಟುವಟಿಕೆಗಳಲ್ಲಿ ಕಂಡುಬರುವ ಸಮಸ್ಯೆಗಳ ಕುರಿತು ಚರ್ಚಿಸಿ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಪಡೆದುಕೊಳ್ಳಬೇಕು. ಈ ಮೂಲಕ ತಮ್ಮ ಸಾಮರ್ಥ್ಯ ವೃದ್ಧಿಸಿಕೊಂಡು ಮಕ್ಕಳ ರಕ್ಷಣೆ ಮತ್ತು ಪೋಷಣೆಯಲ್ಲಿ ಇನ್ನೂ ಹೆಚ್ಚಿನ ಕಾಳಜಿ ವಹಿಸಿ ಕೆಲಸ ಮಾಡಬೇಕೆಂದು ತಿಳಿಸಿದರು.

ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮಿ ಮೈದೂರು ಅವರು ಮಾತನಾಡಿ ಬಾಲ್ಯವಿವಾಹ, ಪೋಕ್ಸೋ, ಪ್ರಕರಣಗಳನ್ನು ತಡೆಯುವಲ್ಲಿ ಸಹಭಾಗಿದಾರರ ಪಾತ್ರ ಬಹಳ ಮುಖ್ಯವಾಗಿದೆ ಹಾಗೂ ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆ ಮತ್ತು ಪುರ್ನವಸತಿ ಒದಗಿಸುವ ಕುರಿತು ಪರಿಪೂರ್ಣವಾಗಿ ಅರಿಯಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಸದಸ್ಯರಾದ ಹೆಚ್.ಸಿ.ರಾಘವೇಂದ್ರ ಅವರು ಮಕ್ಕಳ ಹಕ್ಕುಗಳು ಹಾಗೂ ಮಕ್ಕಳಿಗೆ ಸಂಬಂಧಿತ ಕಾನೂನುಗಳ ಕುರಿತು ವಿಷಯ ಮಂಡಿಸಿದರು.

ವಕೀಲರಾದ ಶಿವಲೀಲಾ ಅವರು "ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳ" ಕುರಿತು ಸಂಪೂರ್ಣ ಮಾಹಿತಿ ನೀಡಿದರು.

ತರಬೇತಿ ಕಾರ್ಯಕ್ರಮದಲ್ಲಿ ಉಪ ನೋಂದಣಿ ಅಧಿಕಾರಿ ದೇವೆಂದ್ರ, ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯ ಮಂಜುನಾಥ, ಮಕ್ಕಳ ರಕ್ಷಣಾಧಿಕಾರಿ ಚನ್ನಬಸಪ್ಪ ಪಾಟೀಲ್, ಮಂಜುನಾಥ, ಅಂಗನವಾಡಿ ಮೇಲ್ವಿಚಾರಕರಾದ ಕ್ಯಾತ್ಯಾಯಿನಿ, ಮಕ್ಕಳ ಸಹಾಯವಾಣಿ ಯೋಜನಾ ಸಂಯೋಜಕ ಕೆ.ಆನಂದ ಸೇರಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಮಕ್ಕಳ ಸಹಾಯವಾಣಿಯ ಸಿಬ್ಬಂದಿ, ಮಕ್ಕಳ ಪಾಲನಾ ಸಂಸ್ಥೆಗಳ ಸಿಬ್ಬಂದಿ ಹಾಗೂ 60 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ಸಾರ್ವಜನಿಕರಿಂದ 183 ಅಹವಾಲು ಸ್ವೀಕಾರ

■ ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ನಗರದ ಸಹಕಾರಿ ಕಲ್ಯಾಣ ಮಂಟಪದಲ್ಲಿ ಗುರುವಾರ ನಡೆದ ಉಪಲೋಕಾಯುಕ್ತರ ಭೇಟಿಯ ಮೊದಲನೇ ದಿನದಂದು ನಡೆದ ಸಾರ್ವಜನಿಕರ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಒಟ್ಟು 183 ಅಹವಾಲುಗಳನ್ನು ಸ್ವೀಕೃತವಾಗಿವೆ ಎಂದು ಗೌರವಾನ್ವಿತ ಉಪ ಲೋಕಾಯುಕ್ತರಾದ ಬಿ.ವೀರಪ್ಪ ಅವರು ತಿಳಿಸಿದರು.

ಕಾರ್ಯಕ್ರಮದ ನಂತರ ಮಾತನಾಡಿ, ಸಾರ್ವಜನಿಕರಿಂದ ಅತಿ ಹೆಚ್ಚು ಅರ್ಜಿಗಳು ಜಿಲ್ಲಾ ಪಂಚಾಯಿತಿಗೆ-60 ಅರ್ಜಿಗಳು ಸ್ವೀಕೃತವಾದರೇ, ಕಂದಾಯ ಇಲಾಖೆ 40, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸಂಬಂಧಿಸಿದಂತೆ 41, ಜೆಸ್ಕಾಂ ಇಲಾಖೆ 6, ಗ್ರಾಮೀಣ ಕುಡಿಯುವ ನೀರು ಸರಬರಾಜು 5, ಆರೋಗ್ಯ ಇಲಾಖೆ 3, ಕೆಎಸ್‌ಆರ್‌ಟಿಸಿ 2, ಕಾರ್ಮಿಕ ಇಲಾಖೆ 3, ಪೊಲೀಸ್ ಇಲಾಖೆ 3, ಶಿಕ್ಷಣ ಇಲಾಖೆ 4, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ 2, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ 2, ಸರ್ವೇ ಇಲಾಖೆ 2, ಸೇರಿದಂತೆ ಪಿಡಬ್ಲ್ಯೂಡಿ, ಆರ್‌ಟಿಓ, ವಾಣಿಜ್ಯ ತೆರಿಗೆ ಇಲಾಖೆ, ಮುರಾರ್ಜಿ ದೇಸಾಯಿ ಶಾಲೆ, ಹೌಸಿಂಗ್ ಬೋರ್ಡ್, ನಗರ ಒಳಚರಂಡಿ, ಅಬಕಾರಿ ಇಲಾಖೆಗಳಿಗೆ ತಲಾ 1 ಅರ್ಜಿಗಳು ಸ್ವೀಕೃತಗೊಂಡಿವೆ. ಉಪಲೋಕಾಯುಕ್ತರ ಪರಿಶೀಲನೆ ಬಳಿಕ ಸ್ಥಳದಲ್ಲಿಯೇ 10 ಪ್ರಕರಣ ಗಳು ಇತ್ಯರ್ಥಗೊಂಡಿವೆ. ಸುಮಾರು 40 ಪ್ರಕರಣಗಳು ಕೇವಲ ಒಂದು ತಿಂಗಳೊಳಗೆ ಇತ್ಯರ್ಥಗೊಳಿಸಲು ಅಧಿಕಾರಿಗಳು ಭರವಸೆ ನೀಡಿದ್ದಾರೆ. ನಿಗದಿತ ವೇಳೆಗೆ ಅಹವಾಲುಗಳಿಗೆ ಪರಿಹಾರ ಕಲ್ಪಿಸುವ ವಿಶ್ವಾಸವನ್ನು ಅಧಿಕಾರಿಗಳ ಮೇಲೆ ಇಟ್ಟಿದ್ದೇನೆ ಎಂದರು.

ಶೀಘ್ರವೇ ಕೆಎಸ್‌ಆರ್‌ಟಿಸಿಯಿಂದ ಅಮರಾವತಿ ನಗರಕ್ಕೆ ಬಸ್ ಸಂಪರ್ಕ ಕಲ್ಪಿಸಬೇಕು. ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಬಳಿ ಗುಟ್ಕಾ, ತಂಬಾಕು, ಸೇರಿದಂತೆ ಮದ್ಯ, ಮಾಂಸ ಮಾರಾಟ ಮಾಡದಂತೆ ನಿಗಾವಹಿಸಿ ಎಂದು ಡಿಎಚ್‌ಓ ಡಾ.ಶಂಕರ ನಾಯ್ಕ, ನಗರಸಭೆ ಆಯುಕ್ತ ಮನೋಹರ್‌ರಿಗೆ ಸೂಚಿಸಿದರು.

## ಕುರುಗೋಡು ರಥೋತ್ಸವ, ಹೋಳಿ

# ಮದ್ಯ ಮಾರಾಟ ನಿಷೇಧ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಮಾರ್ಚ್ 14 ರಂದು ಹೋಳಿ ಹಬ್ಬ ಮತ್ತು ಕುರುಗೋಡು ಶ್ರೀ ದೊಡ್ಡ ಬಸವೇಶ್ವರ ರಥೋತ್ಸವ ಹಾಗೂ ಜಾತ್ರೆ ನಿಮಿತ್ತ ಮಾ.14 ರಂದು ಬೆಳಿಗ್ಗೆ 06 ಗಂಟೆಯಿಂದ ಮಾ.15 ರಂದು ಬೆಳಿಗ್ಗೆ 06 ಗಂಟೆಯವರೆಗೆ ಬಳ್ಳಾರಿ ಜಿಲ್ಲೆಯಾದ್ಯಂತ ಮದ್ಯ ಮಾರಾಟ, ಮದ್ಯ ಸಾಗಾಣಿಕೆ ಮತ್ತು ಮದ್ಯ ಅಂಗಡಿ, ಬಾರ್, ರೆಸ್ಟೋರೆಂಟ್‌ಗಳನ್ನು ತೆರೆಯದಂತೆ ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 21 ರನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ಆದೇಶ ಹೊರಡಿಸಿದ ಅವರು, ಈ ಆದೇಶವು ಡಿಸ್ಟಲರೀಸ್ ರಾಜ್ಯದ ವಿವಿಧ ಕೆಎಸ್‌ಬಿಸಿಎಲ್ ಡಿಪೊಗಳಿಗೆ ದಾಸ್ತಾನು ವಿಲೇವಾರಿ ಮಾಡಲು ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ

# ಹೊಸಪೇಟೆ ನಗರಸಭೆಯಿಂದ ಇ-ಖಾತಾ ತತಕ್ಷಣ ವಿತರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ 35 ವಾರ್ಡಿನ ವಯೋವೃದ್ಧರು ವಿಶ್ವನಾಥ ಮತ್ತು ರಾಮಣ್ಣ ಎಂಬುವರು ನಿವೇಶನದ ಇ-ಖಾತಾ ನೀಡುವಂತೆ ಅಹವಾಲು ಸಲ್ಲಿಸಿದ್ದರು. ಉಪಲೋಕಾಯುಕ್ತರು ಪರಿಶೀಲಿಸಿ ನಗರಸಭೆ ಅಯುಕ್ತರಾದ ಮನೋಹರ್‌ಗೆ ಇಂದೇ ನೀಡುವಂತೆ ಸೂಚಿಸಿದ್ದರು. 4 ಗಂಟೆಗಳ ಅವಧಿಯಲ್ಲಿ ತ್ವರಿತವಾಗಿ 5 ಇ-ಖಾತಾಗಳನ್ನು ಸೃಜಿಸಿ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿತರಿಸಲಾಯಿತು. ಇವರ ಕಾರ್ಯಕ್ಷಮತೆಗೆ ಉಪಲೋಕಾಯುಕ್ತರಾದ ಬಿ.ವೀರಪ್ಪ ರವರು ಮೆಚ್ಚುಗೆ ವ್ಯಕ್ತಪಡಿಸಿ ಎಲ್ಲಾ ನೆರದಿದ್ದ ಅಧಿಕಾರಿಗಳ ಮುಂದೆ ಶ್ಲಾಘಿಸಿದರು.

# ಗ್ರಾಹಕರ ಬೇಡಿಕೆ ಈಡೇರಿಸಿದ ಜೆಸ್ಕಾಂ

## ಅಧಿಕಾರಿಗಳ ಕಾರ್ಯಕ್ಷಮತೆಗೆ ಉಪಲೋಕಾಯುಕ್ತರು ಮೆಚ್ಚುಗೆ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಜೆ.ಎಸ್.ಮಂಜುನಾಥ ಗೃಹ ಬಳಕೆಯ ಸ್ಥಾವರದ ಹೆಚ್ಚುವರಿ ವಿದ್ಯುತ್ ಭಾರ ಕಡಿಮೆಗೊಳಿಸಲು 2.98 ಕಿಲೋ ವ್ಯಾಟ್, 1 ಕಿಲೋವ್ಯಾಟ್ ಕಡಿಮೆಗೊಳಿಸಲು ಅಹವಾಲು ಸಲ್ಲಿಸಿದ್ದರು. ಜೆಸ್ಕಾಂ ಎಇಇ ಜಾನ್ ವೆಸ್ಲಿ ರವರು 2 ಗಂಟೆಯೊಳಗೆ ಕಂಪನಿ ನಿಯಮಾನುಸಾರ ಅಧಿಕೃತ ಜ್ಞಾಪನ ಪತ್ರವನ್ನು ಸ್ಥಳದಲ್ಲಿಯೇ ನೀಡಿದ್ದನ್ನು ಉಪಲೋಕಾಯುಕ್ತರು ಅಧಿಕಾರಿಗಳ ಕಾರ್ಯಕ್ಷಮತೆ ಮೆಚ್ಚುಗೆ ವ್ಯಕ್ತಪಡಿಸಿ ಚಪ್ಪಾಳೆ ನೀಡಿ ಗೌರವಿಸಲು ತಿಳಿಸಿದರು.

## ವೈ.ಎಂ.ವೀರೇಶಯ್ಯ ನಿಧನ



**ಹೊಸಪೇಟೆ :** ತಾಲೂಕಿನ ಕಮಲಾಪುರ ಪಟ್ಟಣದ ವೀರಶೈವ ಸಮಾಜದ ಹಿರಿಯ ವೈ.ಎಂ.ವೀರೇಶಯ್ಯ (75) ಗುರುವಾರ ಬೆಳಗ್ಗೆ ನಿಧನರಾದರು. ಇವರಿಗೆ ಸಹೋದರ, ವಿಜಯವಾಣಿ ಮುಖ್ಯ ಉಪ ಸಂಪಾದಕ ವೈ.ಎಂ.ಬಸವರಾಜ, ಪುತ್ರ – ನ್ಯೂಸ್ 18 ಬೆಂಗಳೂರು ವರದಿಗಾರ ಶರಣು ಹಂಪಿ ಸೇರಿ ಇಬ್ಬರು ಪುತ್ರರು, ಪತ್ನಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಸಂಜೆ ನಡೆಯಿತು.

### ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಪಲ್ಲವಿ.ಜಿ ಹೇಳಿಕೆ

# ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಿ

■ ಹಂಪಿ ಟೈಮ್ಸ್ ಬಳ್ಳಾರಿ

ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಔದ್ಯೋಗಿಕವಾಗಿ ಅವಕಾಶಗಳನ್ನು ಸೃಷ್ಟಿಸಿಕೊಂಡು ಮಹಿಳೆಯರು ಅಭಿವೃದ್ಧಿ ಹೊಂದಬೇಕು ಎಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ ಅವರು ಹೇಳಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜೀವ ವಿಜ್ಞಾನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ" ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಮಹಿಳೆಯರನ್ನು ಪೂಜ್ಯನೀಯ ಸ್ಥಾನದಲ್ಲಿರಿಸಿದ್ದರೂ, ಅವರನ್ನು ಹತ್ತಿಕ್ಕುವುದು ಅನಾದಿ ಕಾಲ ದಿಂದಲೂ ನಡೆಯುತ್ತಿದೆ. ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಬೇಕು. ಪುರುಷ ಪ್ರಧಾನ ದೇಶದಲ್ಲಿ ಮಹಿಳೆಯರು ಸರ್ಕಾರದ ಯೋಜನೆಗಳನ್ನು ಬಳಸಿಕೊಂಡು ಅಭಿವೃದ್ಧಿ ಹೊಂದಬೇಕು. ಶಿಕ್ಷಣ ವಂಚಿತ ಪೋಷಕರ ಮಕ್ಕಳ ಶಿಕ್ಷಣಕ್ಕಾಗಿ ಶೇ.10 ಮೀಸಲಾತಿ ಸರ್ಕಾರ ಕಲ್ಪಿಸಿದೆ. ಇದರ ಸದುಪಯೋಗವಾಗಬೇಕು. ಮಹಿಳೆಯರು ಪ್ರಶ್ನಿಸುವ ಮನೋಭಾವ ಬೆಳಸಿಕೊಂಡಲ್ಲಿ ವೈಚಾರಿಕವಾಗಿ ಮುಂದೆ ಬರುತ್ತಾರೆ ಎಂದರು.




ವಿಶ್ವವಿದ್ಯಾಲಯದ ಕುಲಸಚಿವರಾದ ಎಸ್.ಎನ್.ರುದ್ರೇಶ್ ಅವರು ಮಾತನಾಡಿ, ಸಮಾಜದಲ್ಲಿ ಮಹಿಳೆಯರು ನಾಲ್ಕು ಗೋಡೆಗೆ ಸೀಮಿತವಾಗದೇ ಸಮಾಜಮುಖಿಯಾಗಿ ಬೆಳೆಯಬೇಕು. ಸಾವಿತ್ರಿಬಾಯಿ ಫುಲೆ, ಕಿತ್ತೂರು ರಾಣಿ ಚನ್ನಮ್ಮ, ಒನಕೆ ಓಬವ್ವ, ಮದರ್ ಥೆರೇಸಾ, ಅಕ್ಕಮಹಾದೇವಿ ಯವರ ಚಿಂತನೆಗಳು ಇಂದಿನ ಮಹಿಳೆಯರಿಗೆ ಅದರ್ಶವಾಗಬೇಕು ಎಂದು ಅಭಿಪ್ರಾಯಪಟ್ಟರು.

ಸಮಾಜದ ವಿಜ್ಞಾನ ನಿಕಾಯದ ಡೀನರಾದ ಗೌರಿ ಮಾಣಿಕ್ ಮಾನಸ ಅವರು ಮಾತನಾಡಿ, ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ಕೆಲಸ ಸಮಾಜದಿಂದ ಆಗಬೇಕಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಎಂ.ಮುನಿರಾಜು ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಗಾಗಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಮಹಿಳಾ ದಿನಾಚರಣೆಯ ಪ್ರಯುಕ್ತ ಇತ್ತೀಚೆಗೆ ಆಯೋಜಿಸಿದ್ದ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಪದಕ, ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ನಂತರದಲ್ಲಿ ಜನಪದ ಸಂಗೀತ, ಹಾಸ್ಯ ಕಾರ್ಯಕ್ರಮ ಜರುಗಿದವು.

ಮೌಲ್ಯಮಾಪನ ಕುಲಸಚಿವ ಡಾ.ಎನ್.ಎಂ. ಸಾಲಿ, ಡಾ.ಅಂಶುಮಾಲಿ, ಡಾ.ಗೋಪಾಲ್.ಎನ್ ಸೇರಿದಂತೆ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಇತರರು ಉಪಸ್ಥಿತರಿದ್ದರು. ಡಾ.ಹೆಚ್.ತಿಪ್ಪೇಸ್ವಾಮಿ ನಿರೂಪಿಸಿದರು.


ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**14–03–2025 – ಶುಕ್ರವಾರ**

| | |
|---|---|
| ತಿಥಿ | : ಹುಣ್ಣಿಮೆ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಫಾಲ್ಗುಣ |
| ಯೋಗ | : ಶೂಲ |
| ಕರಣ | : ಭವ |
| ಸೂರ್ಯೋದಯ | : 06:37:54 |
| ಸೂರ್ಯಾಸ್ತ | : 18:34:28 |
| ರಾಹು ಕಾಲ | : 11:07–12:36 |
| ಯಮಘಂಡ ಕಾಲ | : 15:35–17:05 |
| ಗುಳಿಕ ಕಾಲ | : 08:07–09:37 |



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 13–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1601.05 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9949 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 22.907 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1583.96 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 2025 ಕ್ಯುಸೆಕ್ |
| ಸಾಮರ್ಥ್ಯ | 6.663 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

–: ಪ್ರಯತ್ನಿಸು :–

ನೀವು ಹಲವು ಬಾರಿ ಸೋಲಬಹುದು ಆದರೆ ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2023–24 ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಾದ ಪರ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಸ್ನಾತಕೋತ್ತರ ಪದವಿಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1 ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಯ ಅವಧಿಯನ್ನು ಮಾ.30 ರ ವರೆಗೆ ವಿಸ್ತರಿಸಲಾಗಿದೆ.

ಕೋರ್ಸ್ ಗಳ ಕೌನ್ಸೆಲಿಂಗ್ ತಡವಾಗಿ ಪ್ರಾರಂಭವಾಗಿರುವ ಕಾರಣ ಮತ್ತು ಹಿಂದಿನ ಶೈಕ್ಷಣಿಕ ವರ್ಷದ ಫಲಿತಾಂಶ ತಡವಾಗಿ ಬಂದ ಕಾರಣ ನಿಗದಿಪಡಿಸಿದ ಅವಧಿಯೊಳಗೆ ಅರ್ಜಿಗಳು ಸಲ್ಲಿಕೆಯಾಗದ ಕಾರಣ ಅವಧಿ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಲು ಆನ್ ಲೈನ್ ವೆಬ್ ಸೈಟ್ ವಿಳಾಸ https://ssp.postmatric.karnataka.gov.in/ ಗೆ ಭೇಟಿ ನೀಡ ಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಡಿ.ದೇವರಾಜು ಅರಸು ಭವನದ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಅವರು ತಿಳಿಸಿದ್ದಾರೆ.

# ಮೇ 5 ಬಸವ ಜಯಂತಿ ಆಚರಣೆ

### ಅ.ಭಾ.ವೀರಶೈವ ಮಹಾಸಭೆಯ ತಾಲೂಕಧ್ಯಕ್ಷ ಕೊಟ್ರೇಶ್ ಶೆಟ್ಟರ್ ಹೇಳಿಕೆ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಬಸವ ಜಯಂತಿಯನ್ನು ಮೇ 5 ರಂದು ಎಲ್ಲಾ ಸಮಾಜದ ಭಾಂಧವರೊಂದಿಗೆ ಬಹು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಅಖಿಲ ಭಾರತ ವೀರಶೈವ ಮಹಾ ಸಭೆಯ ತಾಲೂಕು ಅಧ್ಯಕ್ಷ ಕೊಟ್ರೇಶ್ ಶೆಟ್ಟರ್ ತಿಳಿಸಿದರು.

ಪಟ್ಟಣದ ಅಖಿಲ ಭಾರತ ವೀರಶೈವಮಹಾ ಸಭೆ ಕಛೇರಿಯಲ್ಲಿ ಗುರುವಾರ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದರು. ಬಸವ ಜಯಂತಿಯ ಕಾರ್ಯಕ್ರಮವನ್ನು ಎತ್ತುಗಳ ಮೆರವಣಿಗೆ ಮೂಲಕ ಬಸವೇಶ್ವರರ ಭಾವ ಚಿತ್ರದೊಂದಿಗೆ ಮುಖ್ಯ ಬೀದಿಗಳಲ್ಲಿ ಸಕಲ ವಾದ್ಯ, ಹಾಗೂ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಗುತ್ತದೆ. ಕಾರ್ಯಕ್ರಮದಲ್ಲಿ ಪರಮ ಪೂಜ್ಯರು, ಅನೇಕ ಗಣ್ಯಮಾನ್ಯರನ್ನು ಆಹ್ವಾನಿಸಲಾಗಿದೆ. ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಎಲ್ಲಾ ಸಮಾಜದ ಭಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದರು. ವೀರಶೈವ ಸಮಾಜದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನ ಮಾಡಲಾಗುತ್ತದೆ ಎಂದರು

ಈ ವೇಳೆಯಲ್ಲಿ ಸದಸ್ಯ ರಾಜೇಶ್ ಬ್ಯಾಡಗಿ, ಸಮಿತಿ ಸದಸ್ಯ ಟಿ ಜಿ ಎಂ. ಕೊಟ್ರೇಶ್, ಜಿ.ಎಂ.ವೀರಭದ್ರಯ್ಯ, ವೀರೇಶ್, ವಿಶ್ವನಾಥ, ಸಕ್ರಿಹಳ್ಳಿ ಕೊಟ್ರೇಶ, ಶಿವರುದ್ರಪ್ಪ ಪೂರ್ಣಯ್ಯ ಎಂ ಸಿದ್ದಯ್ಯ, ಜಿ ಎಂ ಜಗದೀಶ್, ರಾಚಣ್ಣ, ಮಂಗಳ ಗೌರಿ, ಪುಷ್ಪಾ ರೆಡ್ಡಿ, ಮಂಜುಳಾ, ಪಟ್ಟೇದ ಪ್ರಭಾವತಿ ಹಾಗೂ ಇತರರು ಇದ್ದರು.

### ಬಳ್ಳಾರಿಯಲ್ಲಿ ಸಂಭ್ರಮದ ಶ್ರೀ ರೇಣುಕಾಚಾರ್ಯರ ಜಯಂತ್ಯೋತ್ಸವ

# ಸಂತರ ತತ್ವ, ಬದುಕು ಮಹತ್ವಪೂರ್ಣ




■ ಹಂಪಿ ಟೈಮ್ಸ್ ಬಳ್ಳಾರಿ

ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಮಹಾನ್ ಶರಣ ಗುರುಗಳಲ್ಲಿ ಒಬ್ಬರು. ಇವರ ತತ್ವ, ಬದುಕಿನ ಚರಿತ್ರೆ ಮತ್ತು ಧಾರ್ಮಿಕ ಸಾಧನೆಗಳು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ವಪೂರ್ಣ ಸ್ಥಾನ ಪಡೆದಿವೆ ಎಂದು ಕಮ್ಮರಚೇಡು ಕಲ್ಯಾಣ ಸ್ವಾಮಿ ಸಂಸ್ಥಾನ ಮಠದ ಪೂಜ್ಯ ಶ್ರೀ ಕಲ್ಯಾಣ ಮಹಾಸ್ವಾಮಿಯವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಭಾಗವಹಿಸಿ ಅವರು ಮಾತನಾಡಿದರು.

ರೇಣುಕಾಚಾರ್ಯರು ಬಾಲ್ಯದಲ್ಲೇ ಭಕ್ತಿಯಿಂದ ಪರಿಪೂರ್ಣರಾಗಿದ್ದು, ಋಷಿಗಳ ಜೊತೆಯಲ್ಲಿ ನಿರಂತರ ಜ್ಞಾನಸಾಧನೆ ನಡೆಸಿ, ಶೈವ ತತ್ವಗಳನ್ನು ಆಳವಾಗಿ ಅಧ್ಯಯನ ಮಾಡಿದವರು ಎಂದು ತಿಳಿಸಿದರು.

ತೆಲಂಗಾಣದ ಕೊಲ್ಲಿಪಾಕಿ ಎಂಬ ಸ್ಥಳದಲ್ಲಿ ಜನಿಸಿದರೆಂದು ನಂಬಲಾಗಿದೆ. ಲಿಂಗಾಯತ ಧರ್ಮದ ಮೂಲತಃ ಸಿದ್ಧಾಂತಗಳನ್ನು ಪ್ರತಿಪಾದಿಸಲು ಮತ್ತು ಶೈವ ಪರಂಪರೆಯನ್ನು ಬಲಪಡಿಸಲು ಅವರು ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು ಎಂದರು.

ಇಷ್ಟಲಿಂಗ ಧಾರಣೆಯ ಮೂಲಕ ಭಗವಂತನನ್ನು ವೈಯಕ್ತಿಕ ಅನುಭವದ ಮೂಲಕ ಅರಿತುಕೊಳ್ಳಬೇಕೆಂಬ ತತ್ವವನ್ನು ರೇಣುಕಾಚಾರ್ಯರು ಪ್ರತಿಪಾದಿಸಿದರು. ಅವಮಾನಿತ ವರ್ಗಗಳನ್ನು ಪ್ರೀತಿಸಿ, ಅವರಿಗೆ ತತ್ವಶಾಸ್ತ್ರದ ಮತ್ತು ಧಾರ್ಮಿಕ ಶಿಕ್ಷಣ ನೀಡಿದರು ಎಂದು ತಿಳಿಸಿದರು.

ಸಮಾನತೆ ಎಂಬ ತತ್ವಕ್ಕೆ ಮಹತ್ವ ನೀಡಿ, ಅದರಲ್ಲಿ ಎಲ್ಲಾ ವರ್ಣಗಳೂ ಸಮಾನವೆಂಬ ನಂಬಿಕೆಯನ್ನು ಹರಡಿದರು. ರೇಣುಕಾಚಾರ್ಯರ ಜೀವನ ಮತ್ತು ತತ್ವಗಳು ಶಿವಪುರಾಣ, ಬಸವಪುರಾಣ ಮತ್ತು ಇತರ ಶೈವ ಪುರಾಣಗಳಲ್ಲಿ ವಿವರಿಸಲಾಗಿದೆ. ಇವರ ತತ್ವಗಳು ಇಂದು ಸಮಾಜದ ಸಮಾನತೆ, ಧಾರ್ಮಿಕ ಸಮರಸತೆ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಆಧುನಿಕ ದಾರಿದೀಪಗಳಾಗಿವೆ ಎಂದು ಬಿಂಬಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಗಣ್ಯರು ಶ್ರೀ ಜಗದ್ಗುರು ರೇಣುಕಾಚಾರ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಬಳ್ಳಾರಿಯ ಸಂಧ್ಯಾ ಕೋಲಾಚಲಂ ತಂಡದಿಂದ ಭಕ್ತಿ ಸಂಗೀತ ಗಾಯನ ಪ್ರಸ್ತುತ ಪಡಿಸಿದರು. ಕುಡಿತಿನಿಯ ಪ್ರೇಮ್ ಸಾಗರ್ ಅವರಿಂದ ಯಕ್ಷಗಾನ ನೃತ್ಯ ಹಾಗೂ ಡ್ರಿಮ್ ವರ್ಲ್ಡ್ ಶಾಲೆ ವಿದ್ಯಾರ್ಥಿಗಳಿಂದ 'ಭೂ ಲೋಕದಲ್ಲಿ ವೀರಶೈವ ಧರ್ಮ ಸ್ಥಾಪನೆ' ಎಂಬ ಕಿರುನಾಟಕ ಪ್ರದರ್ಶಿಸಿದರು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಮುದಾಯದ ಐವರು ಗಣ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ್, ಮಹಾನಗರ ಪಾಲಿಕೆಯ ಸದಸ್ಯರಾದ ಸುರೇಖಾ ಮಲ್ಲನಗೌಡ, ವೀರಶೈವ ವಿದ್ಯಾವರ್ಧಕ ಸಂಘದ ಜಿಲ್ಲಾಧ್ಯಕ್ಷ ಡಾ.ಕಣೇಕಲ್ ಮಹಾಂತೇಶ, ಹರಗಿನ 'ಡೋಣಿ ಪಂಚಮಣಿಗಿ ಸಂಸ್ಥಾನ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ, ಮೇಟಿ ದೊಡ್ಡಪ್ಪನವರ ವೈದಿಕ ಜೋತಿಷ್ಯ ಪಾಠಶಾಲೆಯ ಡಾ.ಪಂಪಾಪತಿ ಶಾಸ್ತ್ರೀ, ಅಂತಾಪುರದ ಪಂಡಿತ ಶರಣರು ಸೇರಿದಂತೆ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ಸಂಭ್ರಮದ ಮೆರವಣಿಗೆಗೆ ಮೇಯರ್ ಚಾಲನೆ:** ಶ್ರೀ ಜಗದ್ಗುರ ರೇಣುಕಾಚಾರ್ಯ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ಸಂಭ್ರಮದಿಂದ ನಡೆಯಿತು. ಮೆರವಣಿಗೆಗೆ ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್ ಅವರು ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನ ಸೆಳೆದವು. ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ತೇರು ಬೀದಿ, ಹೆಚ್.ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.



# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಈಗಿಂದಲೇ ಪುನರ್‌ಮನನ ಮಾಡಿ

ಪರೀಕ್ಷೆ ಮಾರ್ಚ್ 21 ರಿಂದ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ವಿಜ್ಞಾನ

**ರಸಾಯನ ವಿಜ್ಞಾನ [ಪುನರಾವರ್ತನೆ]** ಮುಂದುವರೆದ ಭಾಗ ........

**1. ಉಭಯಧರ್ಮಿ ಆಕ್ಸೈಡ್‌ಗಳು ಎಂದರೇನು ? ಉಭಯಧರ್ಮಿ ಆಕ್ಸೈಡ್‌ಗಳಿಗೆ ಉದಾಹರಣೆ ಬರೆಯಿರಿ ?**

ಉತ್ತರ : ಕೆಲವು ಲೋಹದ ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಆಕ್ಸೈಡ್‌ಗಳೆರಡರೊಂದಿಗೆ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ ಆಕ್ಸೈಡ್‌ಗಳು ಎನ್ನುವರು.
ಉದಾ :– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್.

**2. ಅಯಾನಿಕ್ ಸಂಯುಕ್ತಗಳ ಗುಣಗಳನ್ನು ಬರೆಯಿರಿ.**

ಉತ್ತರ : * ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ.
* ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.
* ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ.
* ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.
* ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ವಿದ್ಯುತ್ ವಾಹಕವಾಗಿರುತ್ತದೆ.

**3. ಕಾಸುವಿಕೆ ಮತ್ತು ಹುರಿಯುವಿಕೆಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.**

| ಕಾಸುವಿಕೆ | ಹುರಿಯುವಿಕೆ |
|---|---|
| * ಅದುರುಗಳನ್ನು ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯೊಂದಿಗೆ ಕಾಸುವ ಪ್ರಕ್ರಿಯೆಯನ್ನು ಕಾಸುವಿಕೆ ಎನ್ನುವರು. | * ಅದುರುಗಳನ್ನು ಹೆಚ್ಚಿನ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯೊಂದಿಗೆ ಕಾಸುವ ಪ್ರಕ್ರಿಯೆಯನ್ನು ಹುರಿಯುವಿಕೆ ಎನ್ನುವರು. |
| * ಈ ವಿಧಾನದಲ್ಲಿ ಕಾರ್ಬೋನೇಟ್ ಅದಿರುಗಳನ್ನು ಆಕ್ಸೈಡ್‌ಗಳಾಗಿ ಪರಿವರ್ತಿಸಲಾಗುತ್ತದೆ. | * ಈ ವಿಧಾನದಲ್ಲಿ ಸಲ್ಫೈಡ್ ಅದಿರುಗಳನ್ನು ಆಕ್ಸೈಡ್‌ಗಳಾಗಿ ಪರಿವರ್ತಿಸಲಾಗುತ್ತದೆ |

**4. ಸೋಡಿಯಂ ಪರಮಾಣು ಮತ್ತು ಕ್ಲೋರಿನ್ ಪರಮಾಣುಗಳ ನಡುವೆ ಅಯಾನಿಕ ಬಂಧ ಉಂಟಾಗುವಿಕೆಯನ್ನು ವಿವರಿಸಿ.**
**(ಸೋಡಿಯಂ ಪರಮಾಣು ಸಂಖ್ಯೆ 11, ಕ್ಲೋರಿನ್ ಪರಮಾಣು ಸಂಖ್ಯೆ 17)**

ಉತ್ತರ : ಸೋಡಿಯಂ ಪರಮಾಣುವಿನ ಇಲೆಕ್ಟ್ರಾನು ವಿನ್ಯಾಸ 2, 8, 1
ಕ್ಲೋರಿನ್ ಪರಮಾಣುವಿನ ಇಲೆಕ್ಟ್ರಾನು ವಿನ್ಯಾಸ 2, 8, 7
ಸ್ಥಿರ ಅಷ್ಟಕ ವಿನ್ಯಾಸ ಪಡೆಯಲು ಸೋಡಿಯಂ ಒಂದು ಇಲೆಕ್ಟ್ರಾನ್ ಕಳೆದುಕೊಂಡ ಸೋಡಿಯಂ ಧನ ಅಯಾನು ( $Na^+$ ) ಆಗುತ್ತದೆ.
ಕ್ಲೋರಿನ್ ಪರಮಾಣು ಸೋಡಿಯಂನಿಂದ ಒಂದು ಇಲೆಕ್ಟ್ರಾನ್ ಪಡೆದುಕೊಂಡ ಕ್ಲೋರೈಡ್ ಋಣ ( $Cl^-$ ) ಅಯಾನು ಆಗುತ್ತದೆ.
ಪರಸ್ಪರ ವಿರುದ್ಧ ವಿದ್ಯುದಂಶ ಪಡೆದ $Na^+$ ಮತ್ತು $Cl^-$ ಅಯಾನುಗಳ ನಡುವೆ ಸ್ಥಾಯಿವಿದ್ಯುತ್ ಆಕರ್ಷಣಾ ಬಲ ಉಂಟಾಗಿ ಸೋಡಿಯಂ ಕ್ಲೋರೈಡ್ (NaCl) ಉಂಟಾಗುತ್ತದೆ.

$$Na \longrightarrow Na^+ + e^-$$
$$2, 8, 1 \qquad 2, 8$$
$$Cl + e^- \longrightarrow Cl^-$$
$$2, 8, 7 \qquad 2, 8, 8$$



**5. ಮಿಶ್ರಲೋಹಗಳು ಎಂದರೇನು ? ಈ ಕೆಳಗಿನ ಮಿಶ್ರಲೋಹದಲ್ಲಿರುವ ಘಟಕ ಧಾತುಗಳನ್ನು ಹೆಸರಿಸಿ.**
**a. ಕಂಚು b. ಬೆಸುಗೆ ಲೋಹ c. ಕಲೆರಹಿತ ಉಕ್ಕು d. ಹಿತ್ತಾಳೆ**

ಉತ್ತರ : ಎರಡು ಅಥವಾ ಹೆಚ್ಚು ಲೋಹ ಅಥವಾ ಲೋಹ–ಅಲೋಹಗಳ ಸಮರೂಪದ ಮಿಶ್ರಣವೇ ಮಿಶ್ರಲೋಹ.

a. ಕಂಚು ನಲ್ಲಿರುವ ಘಟಕ ಧಾತುಗಳು– ತಾಮ್ರ ಮತ್ತು ತವರ
b. ಬೆಸುಗೆ ಲೋಹದನಲ್ಲಿರುವ ಘಟಕ ಧಾತುಗಳು – ಸೀಸ ಮತ್ತು ತವರ
c. ಕಲೆರಹಿತ ಉಕ್ಕು ನಲ್ಲಿರುವ ಘಟಕ ಧಾತುಗಳು– ಕಬ್ಬಿಣ, ನಿಕ್ಕಲ್, ಕ್ರೋಮಿಯಂ
d. ಹಿತ್ತಾಳೆ ನಲ್ಲಿರುವ ಘಟಕ ಧಾತುಗಳು– ತಾಮ್ರ ಮತ್ತು ಸತು

**6. ಥರ್ಮೈಟ್ ಕ್ರಿಯೆಗಳು ಎಂದರೇನು ? ಥರ್ಮೈಟ್ ಕ್ರಿಯೆಗಳ ಪ್ರಾಯೋಗಿಕ ಅನ್ವಯಗಳನ್ನು ತಿಳಿಸಿ.**


ಉತ್ತರ : ಹೆಚ್ಚು ಕ್ರಿಯಾಪಟು ಲೋಹಗಳನ್ನು ಅಪಕರ್ಷಕವಾಗಿ ಬಳಸಿ ಕಡಿಮೆ ಕ್ರಿಯಾಪಟು ಲೋಹಗಳನ್ನು ಅವುಗಳ ಆಕ್ಸೈಡ್ ಗಳಿಂದ ಪಡೆಯುವ ಸ್ಥಾನ ಪಲ್ಲಟ ಕ್ರಿಯೆಯನ್ನು ಥರ್ಮೈಟ್ ಕ್ರಿಯೆ ಎನ್ನುವರು.
ಥರ್ಮೈಟ್ ಕ್ರಿಯೆಗಳ ಪ್ರಾಯೋಗಿಕ ಅನ್ವಯಗಳು :
* ರೈಲ್ವೆ ಹಳಿಗಳನ್ನು ಜೋಡಿಸಲು.
* ಮುರಿದ ಯಂತ್ರಭಾಗಗಳ ಜೋಡಣೆಯಲ್ಲಿ ಬಳಸುತ್ತಾರೆ.

**7. ಸಾಬೂನು ಬಟ್ಟೆಯನ್ನು ಹೇಗೆ ಸ್ವಚ್ಛಗೊಳಿಸುತ್ತದೆ ? ವಿವರಿಸಿ.**

ಉತ್ತರ: • ಸಾಬೂನಿನ ಅಣುಗಳು ಉದ್ದ ಸರಪಳಿಯ ಕಾರ್ಬಾಕ್ಸಿಲಿಕ್ ಆಮ್ಲಗಳ – ಸೋಡಿಯಂ ಅಥವಾ ಪೊಟಾಸಿಯಂ ಲವಣಗಳಾಗಿವೆ.
ಸಾಬೂನಿನ ಅಣುಗಳ ಹೈಡ್ರೋಕಾರ್ಬನ್ ತುದಿಯು ಜಿಡ್ಡಿನ ಕಡೆಗೆ ಮತ್ತು ಅಯಾನಿಕ ತುದಿಯು ಹೊರಮುಖವಾಗಿರುತ್ತದೆ.
ಸಾಬೂನಿನ ಅಣುಗಳು ನೀರಿನೊಂದಿಗೆ ವರ್ತಿಸಿದಾಗ ಮಿಸೆಲ್‌ಗಳೆಂಬ ರಚನೆಯನ್ನು ಉಂಟುಮಾಡುತ್ತವೆ.
ನೀರಿನೊಂದಿಗೆ ತೊಳೆದಾಗ ಈ ಮಿಸೆಲ್‌ಗಳು ಜಿಡ್ಡನ್ನು ಕಿತ್ತು ಹೊರತೆಗೆದು ಬಟ್ಟೆಗಳನ್ನು ಸ್ವಚ್ಛಗೊಳಿಸಲು ಸಹಾಯಮಾಡುತ್ತವೆ.

**8. ರಚನಾ ಸಮಾಂಗಿಗಳು ಎಂದರೇನು ? ಸಮಾಂಗತೆಯನ್ನು ತೋರಿಸುವ ಅಲ್ಕೇನ್‌ಗಳ ಮೊದಲ ಸದಸ್ಯ ಹೆಸರಿಸಿ? ಅದರ ರಚನಾ ಸಮಾಂಗಿಗಳನ್ನು ಬರೆಯಿರಿ**


ಉತ್ತರ: ಒಂದೇ ಅಣುಸೂತ್ರ ಆದರೆ ಭಿನ್ನ ರಚನಾ ವಿನ್ಯಾಸ ಹೊಂದಿರುವ ಸಂಯುಕ್ತಗಳನ್ನು ಸಮಾಂಗಿಗಳು ಎನ್ನುವರು
ಸಮಾಂಗತೆಯನ್ನು ತೋರಿಸುವ ಅಲ್ಕೇನ್‌ಗಳ ಮೊದಲ ಸದಸ್ಯ – ಬ್ಯೂಟೇನ್ $C_4H_{10}$




n–ಬ್ಯೂಟೇನ್ ಐಸೋ– ಬ್ಯೂಟೇನ್

**9. ಸೈಕ್ಲೋಹೆಕ್ಸೇನ್ , ಬೆಂಜೀನ್ ಗಳ ಅಣುಸೂತ್ರ ಮತ್ತು ರಚನಾ ವಿನ್ಯಾಸವನ್ನು ಬರೆಯಿರಿ.**

ಉತ್ತರ : ಸೈಕ್ಲೋಹೆಕ್ಸೇನ್ ಅಣುಸೂತ್ರ : $C_6H_{12}$
ರಚನಾ ವಿನ್ಯಾಸ :



ಬೆಂಜೀನ್ ಅಣುಸೂತ್ರ : $C_6H_6$
ರಚನಾ ವಿನ್ಯಾಸ :



*ನಾನು ಓದುತ್ತಿರುವುದು, ನಾಳಿನ ನನ್ನ ಉತ್ತಮ ಭವಿಷ್ಯಕ್ಕಾಗಿ....*

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ